ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 56 RNI Number : KNKAN/25/A2770 02-03-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :56 ರಾಯಚೂರು 02-03-2026 ಸೋಮವಾರ ಪುಟ 04 ಬೆಲೆ ರೂ.2/- ಮೊ:8660146563

ದುಬೈನಲ್ಲಿ ಸಿಲುಕಿರುವ ಕನ್ನಡಿಗರ ಜೊತೆ ಮಾತನಾಡಿದ ಸಿಎಂ; ನೆರವಿಗೆ ಮುಂದಾದ ಶಾಸಕ ನಾಗೇಂದ್ರ

ಬೆಂಗಳೂರು/ಬಳ್ಳಾರಿ : ಇಸ್ರೇಲ್ - ಇರಾನ್ ನಡುವಿನ ಉದ್ವಿಗ್ನ ಪರಿಸ್ಥಿತಿಯಿಂದಾಗಿ ದುಬೈನಲ್ಲಿ ಸಿಲುಕಿರುವ ಕನ್ನಡಿಗರ ಜೊತೆ ಸಿಎಂ ಸಿದ್ದರಾಮಯ್ಯ ಅವರು ಮಾತನಾಡಿ ಧೈರ್ಯ ತುಂಬಿದ್ದಾರೆ.

ಈ ಸಂಬಂಧ ಎಕ್ಸ್ ಪೋಸ್ಟ್ ಮಾಡಿರುವ ಅವರು, ಇಸ್ರೇಲ್ - ಇರಾನ್ ನಡುವಿನ ಉದ್ವಿಗ್ನ ಪರಿಸ್ಥಿತಿಯಿಂದಾಗಿ ದುಬೈನಲ್ಲಿ ಸಿಲುಕಿರುವ ಕನ್ನಡಿಗರ ಜೊತೆ ಮಾತನಾಡಿ, ಧೈರ್ಯ ತುಂಬಿದ್ದೇನೆ. ಅಧಿಕಾರಿಗಳ ಜೊತೆ ಚರ್ಚೆ ನಡೆಸಿ ದುಬೈ ಸೇರಿದಂತೆ ಯುದ್ಧಪೀಡಿತ ಪ್ರದೇಶಗಳಲ್ಲಿ ಸಿಲುಕಿರುವ ಕನ್ನಡಿಗರ ಸದ್ಯದ ಪರಿಸ್ಥಿತಿಯ ಕುರಿತು ಮಾಹಿತಿ ಪಡೆದು, ಬಳಿಕ ಅವರನ್ನು ತವರಿಗೆ ವಾಪಸ್ ಕರೆ ತರುವ ಸಂಬಂಧ ವಿದೇಶಾಂಗ ಇಲಾಖೆ ಅಧಿಕಾರಿಗಳ ಜೊತೆ ಸಂಪರ್ಕದಲ್ಲಿರುವಂತೆ ಮುಖ್ಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಿರುವುದಾಗಿ ತಿಳಿಸಿದ್ದಾರೆ.

ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಇರುವ ಕನ್ನಡಿಗರು ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆದಿರುವುದು ತುಸು ಸಮಾಧಾನಕರ ವಿಚಾರ. ಯಾರೊಬ್ಬರೂ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ಪ್ರತಿಯೊಬ್ಬರನ್ನೂ ಸುರಕ್ಷಿತವಾಗಿ ಕರೆತರುವ ನಿಟ್ಟಿನಲ್ಲಿ ನಮ್ಮ ಪ್ರಯತ್ನ ನಿರಂತರವಾಗಿರಲಿದೆ ಎಂದು ಅಭಯ ನೀಡಿದ್ದಾರೆ.

ನೆರವಿಗೆ ಮುಂದಾದ ಶಾಸಕ ಬಿ. ನಾಗೇಂದ್ರ (ಬಳ್ಳಾರಿ) : ದುಬೈನಲ್ಲಿ ಬಳ್ಳಾರಿ ಜಿಲ್ಲೆಯ ಕನ್ನಡಿಗರು ಸಂಕಷ್ಟಕ್ಕೆ ಸಿಲುಕಿ ಪರದಾಟ ನಡೆಸುತ್ತಿರುವುದರಿಂದಾಗಿ ಅವರ ನೆರವಿಗೆ ಶಾಸಕ ಬಿ. ನಾಗೇಂದ್ರ ಅವರು ಮುಂದಾಗಿದ್ದಾರೆ.

ಬಳ್ಳಾರಿ ಜಿಲ್ಲೆಯ 50ಕ್ಕೂ ಹೆಚ್ಚು ಜನರು ಹಣಕಾಸು ತೊಂದರೆಗೆ ಸಿಲುಕಿ ಪರದಾಟ ನಡೆಸುತ್ತಿರುವುದರಿಂದಾಗಿ ದುಬೈನಲ್ಲಿರುವ ಸ್ನೇಹಿತ ನಜೀಬ್ ಮೂಲಕ ನಾಗೇಂದ್ರ ಅವರು ನೆರವಿಗೆ ಮುಂದಾಗಿದ್ದಾರೆ.

ದುಬೈನಲ್ಲಿ ಸಿಲುಕಿದ ಜಿಲ್ಲೆಯ ಜನರಿಗೆ ಸ್ನೇಹಿತನ ಸಹಾಯದಿಂದ ಊಟದ ವ್ಯವಸ್ಥೆ ಮಾಡಿಸಿದ್ದಾರೆ. ಇದೀಗ ವಿಡಿಯೋ ಕಾಲ್ ಮೂಲಕ ಬಳ್ಳಾರಿ ಜನರೊಂದಿಗೆ ಅವರು ಮಾತನಾಡಿದ್ದಾರೆ.

ದುಬೈನಲ್ಲಿ ಸಿಲುಕಿದ ಬಳ್ಳಾರಿ ಶಾಸಕ, 50 ಜನರ ತಂಡ : ಅಮೆರಿಕ-ಇಸ್ರೇಲ್ ಮತ್ತು ಇರಾನ್ ಯುದ್ಧದಿಂದಾಗಿ ಮಧ್ಯಪ್ರಾಚ್ಯ ದೇಶಗಳಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಹಲವೆಡೆ ವೈಮಾನಿಕ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ. ಹಾಗೆಯೇ ದುಬೈನಿಂದ ಭಾರತಕ್ಕೆ ಬರಬೇಕಿದ್ದ ವಿಮಾನಗಳನ್ನು ರದ್ದು ಮಾಡಲಾಗಿದೆ. ಇದರ ಪರಿಣಾಮ ಬಳ್ಳಾರಿ ಶಾಸಕ ನಾರಾ ಭರತ್ ರೆಡ್ಡಿ ಮತ್ತು ಪ್ರವಾಸಕ್ಕೆ ತೆರಳಿದ್ದ ಕರ್ನಾಟಕದ 50 ಜನ ಅಲ್ಲೇ ಸಿಲುಕಿಕೊಂಡಿದ್ದಾರೆ.

ದುಬೈನಲ್ಲಿ ಸಿಲುಕಿದ ಬಳ್ಳಾರಿ ಮೂಲದವರು : ವಯೋವೃದ್ಧರು ಸೇರಿ ಬಳ್ಳಾರಿ, ಚಿತ್ರದುರ್ಗ ಮತ್ತು ದಾವಣಗೆರೆಯ 50 ಜನರು ದುಬೈ ಪ್ರವಾಸ ಕೈಗೊಂಡಿದ್ದರು. ಪ್ರವಾಸ ಮುಗಿಸಿದ ತಂಡ ಶನಿವಾರ ದುಬೈನಿಂದ 9 ಗಂಟೆಯ



ವಿಮಾನಕ್ಕೆ ಭಾರತಕ್ಕೆ ಆಗಮಿಸಬೇಕಿತ್ತು. ಆದರೆ ಅಮೆರಿಕ, ಇಸ್ರೇಲ್ ಮತ್ತು ಇರಾನ್ ಮಧ್ಯೆ ಯುದ್ಧ ಆರಂಭವಾಗಿರುವುದರಿಂದ ವಿಮಾನಗಳನ್ನು ರದ್ದುಪಡಿಸಲಾಗಿದೆ. ಹೀಗಾಗಿ, ಕನ್ನಡಿಗರು ಅಲ್ಲೇ ಸಿಲುಕಿಕೊಂಡಿದ್ದಾರೆ.

ಹೋಳಿ ಹಬ್ಬದ ಪ್ರಯುಕ್ತ ಶಾಂತಿ ಸಭೆ

ಶಾಂತಿ ಸೌಹಾರ್ದತೆಯಿಂದ ಹಬ್ಬಗಳನ್ನು ಆಚರಿಸಿ : ಕುಮಾರಸ್ವಾಮಿ

ರಾಯಚೂರು.ಮಾ.01-

ನಗರದ ಸದಾರ ಬಜಾರ ಠಾಣೆಯಲ್ಲಿ ಹೆಚ್ಚುವರಿ ಪೋಲೀಸ್ ಅಧೀಕ್ಷಕರಾದ ಕುಮಾರಸ್ವಾಮಿ ಎಸ್.ಜೆ. ಅಧ್ಯಕ್ಷತೆ, ಠಾಣೆಯ ಸಿ.ಪಿ.ಐ. ಉಮೇಶ ಕಾಂಬ್ಳೆಯವರ ನೇತೃತ್ವದಲ್ಲಿ ಹೋಳಿ ಹಬ್ಬದ ಪ್ರಯುಕ್ತ ಶಾಂತಿ ಸಭೆಯನ್ನು ಕರೆಯಲಾಗಿತ್ತು.



ಸಭೆಯಲ್ಲಿ ನಗರದ ಹಿರಿಯರು ತಮ್ಮ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ ನಮ್ಮ ಜಿಲ್ಲೆಯು ಶಾಂತಿ ಸೌಹಾರ್ದತೆಗೆ ಇಡೀ ಕರ್ನಾಟಕವಲ್ಲದೇ ದೇಶದಲ್ಲಿ ಹೆಸರುವಾಸಿಯಾಗಿದೆ, ಅದೇ ರೀತಿಯಲ್ಲಿ ಯಾವುದೇ ಒಂದು ಧರ್ಮ ಹಬ್ಬಗಳಿದ್ದರೂ ಸಹಿತ ಪೋಲೀಸ್ ಇಲಾಖೆಯವರು ಅತ್ಯಂತ ಸೂಕ್ತ ಭದ್ರತೆಯನ್ನು ಹೊದಗಿಸಿ ಕಿಂಚಿತ್ತೂ ತೊಡಕು ಗದ್ದಲ ಗಲಾಟೆಯಾಗದಂತೆ ನಿಗಾವಹಿಸುವ ದಕ್ಷ ಅಧಿಕಾರಿಗಳೇ ನಮ್ಮ ರಾಯಚೂರಿಗೆ ಬರುತ್ತಿರುವುದು ನಮಗೆಲ್ಲ ಸಂತೋಷ ತಂದಿದೆ, ಮುಂದೆಯೂ ಸಹ ಹೀಗೆ ತಮ್ಮ ಕರ್ತವ್ಯ ನಿರ್ವಹಿಸಿ ರಾಯಚೂರು ಜಿಲ್ಲೆಯನ್ನು ಶಾಂತಿಯ ತೋಟದಂತೆ ಕಾಪಾತ್ತಿರಿ ಎಂಬ ನಂಬಿಕೆ ನಮಗಿದೆ, ಒಂದು ಗ್ರಾಮ, ತಾಲೂಕು ಜಿಲ್ಲೆ ಅಂದ ಮೇಲೆ ಸಣ್ಣ ಪುಟ್ಟ ಹುಡುಗರ ಗಲಾಟೆಗಳು ಇದ್ದೇ ಇರುತ್ತವೆ, ಅದನ್ನೆಲ್ಲಾ ಬದಿಗೊತ್ತಿ ಹೋಳಿ ಹಾಗೂ ರಮಜಾನ್ ಹಬ್ಬಗಳಿಗೆ ಸೂಕ್ತ ಭದ್ರತೆ ನೀಡಬೇಕೆಂದು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಹೆಚ್ಚುವರಿ ಪೋಲೀಸ ಅಧೀಕ್ಷಕರಾದ ಕುಮಾಸ್ವಾಮಿ ಎಸ್.ಜೆ. ಯವರು ರಾಯಚೂರು ಜಿಲ್ಲೆ ಶಾಂತಿ ಸೌಹಾರ್ಧತೆಗಳ ಭಾಂದವ್ಯದ ತವರೂರಾಗಿದೆ ಶಾಂತಿ ಸಂಭ್ರಮದಿಂದ ಹಬ್ಬಗಳನ್ನು ಆಚರಿಸಿ, ಒಬ್ಬ ಮನುಷ್ಯ ಬೆಳೆಯಬೇಕಾದರೆ ಸಮುದಾಯ ಅಥವಾ ಸಮಾಜದ ಸಹಾಯ ಸಹಕಾರ ಬೇಕೇ ಬೇಕು ಮನುಷ್ಯ ಜೀವನ ಬರಯವಾಗ ಏನೂ ತಂದಿಲ್ಲ ಹೋಗುವಾಗಲೂ ಏನನ್ನೂ ಕೊಂಡೊಯ್ಯುವುದಿಲ್ಲ ಇರುವವರೆಗೂ ಸರ್ವರೂ ಅಣ್ಣ ತಮ್ಮರಂತೆ ಬದುಕುವುದೇ ನಮ್ಮೆಲ್ಲರ ಕರ್ತವ್ಯವಾಗಿದೆ, ನಾವು

3ನೇ ಪುಟಕ್ಕೆ

ದೇವದುರ್ಗ ಪಟ್ಟಣದಲ್ಲಿ ವಿವಿಧ ಕಾಮಗಾರಿಗಳಿಗೆ ಶಾಸಕಿ ಕರೆಮ್ಮ ಜಿ. ನಾಯಕ ಅವರಿಂದ ಅಡಿಗಲ್ಲು ಸಮಾರಂಭ



ಕಲ್ಯಾಣ ಅಸ್ತ್ರ

ದೇವದುರ್ಗ,ಮಾ.01-

ಪಟ್ಟಣದ ಸಾರ್ವಜನಿಕ ಕ್ಲಬ್ ನಿಂದ ಡಾ. ಬಿಆರ್ ಅಂಬೇಡ್ಕರ್ ಸರ್ಕಲ್ ಅವರಿಗೆ, ಮತ್ತು ಮಹಾತ್ಮ ಗಾಂಧಿ ಸರ್ಕಲ್ ಮುಖ್ಯ ರಸ್ತೆದವರಿಗೆ ಡಾಂಬರ್ ರಸ್ತೆ ನಿರ್ಮಾಣ ಅಂದಾಜು ಮೊತ್ತ 148. ಲಕ್ಷ ಮತ್ತು. ದೇವದುರ್ಗ ಪಟ್ಟಣದ ಬಾಪೂಜಿ ಓಣಿಯಲ್ಲಿ ವಿದ್ಯುತ್ ಹೈ ಮಾಸ್ಕ್ ದೀಪಾ ಅ ವಳವಡಿಕೆ ಅಂದಾಜು. ಮೊತ್ತ.6.00 ಲಕ್ಷ ದೇವದುರ್ಗ ಪಟ್ಟಣದ ಬಾಪೂಜಿ ಓಣಿಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು ಅಂದಾಜು. ಮೊತ್ತ.20. ಲಕ್ಷ ದೇವದುರ್ಗ ಪಟ್ಟಣದ ಬಸವೇಶ್ವರ ವೃತ್ತ ದಿಂದ ತಪ್ಪರಗುಂಡ ಮಸೀದಿ ವರೆಗೆ ಡಾಂಬರ ರಸ್ತೆ ಹಾಗೂ ಚರಂಡಿ ನಿರ್ಮಾಣ ಮಾಡುವುದು. ಅಂದಾಜು ಮೊತ್ತ.50.625. ಲಕ್ಷ ದೇವದುರ್ಗ ಪಟ್ಟಣದ ರಾಮಸ್ವಾಮಿ ಗುಡಿಯ ಹತ್ತಿರ ಸಿಸಿ ನಿರ್ಮಾಣ ಅಂದಾಜು ಮೊತ್ತ.4. ಲಕ್ಷ, ಹಾಗೂ. ದೇವದುರ್ಗ ಪಟ್ಟಣದ ನಾಮನಾಯಕ ತಂಡದಲ್ಲಿ ಹೊಸದಾಗಿ ಬೋರ್ವೆಲ್ ಕೊರೆದು ಮೋಟಾರ್ ಅಳವಡಿಸಿ ಸಿಸ್ಟರ್ 9ಹಾಗೂ ಪೈಪ್ ಲೈನ್ ಅಳವಡಿಸುವುದು ಅಂದಾಜು ಮೊತ್ತ.10. ಲಕ್ಷ.

ಈ ಎಲ್ಲಾ ಕಾಮಗಾರಿಗಳಿಗೆ ಗುದ್ದಲಿ ಪೂಜೆಯನ್ನು ಜನಪ್ರಿಯ ಶಾಸಕರಾದ ಕರೆಮ್ಮ ಜಿ ನಾಯಕ್ ನೆರವೇರಿಸಿದರು

ಈ ಕಾರ್ಯಕ್ರಮದಲ್ಲಿ ಪಕ್ಷದ ಮುಖಂಡರು ಊರಿನವರು ಅನೇಕರು ಭಾಗವಹಿಸಿದ್ದರು

ರಂಜಾನ್ ಉಪವಾಸ ನಿರತರಿಗೆ ವಿದ್ಯಾನಗರ ಯುವ ಬಳಗದಿಂದ ಹಣ್ಣು -ಹಂಪಲು ವಿತರಣೆ

ಸಿರವಾರ.ಮಾ01- ಇಸ್ಲಾಂರ ಪವಿತ್ರ ಹಬ್ಬವಾದ ರಂಜಾನ್ ಹಬ್ಬ. ಇಸ್ಲಾಮಿಕ್ ಕ್ಯಾಲೆಂಡರ್‌ನ 9ನೇ ಮತ್ತು ಅತ್ಯಂತ ಪವಿತ್ರವಾದ ತಿಂಗಳು ಇದರಲ್ಲಿ ಮುಸ್ಲಿಮರು ಒಂದು ತಿಂಗಳುಗಳ ಕಾಲ ಉಪವಾಸ ಆಚರಿಸುತ್ತಾರೆ.



ಸಿರವಾರ ಪಟ್ಟಣದ ಜಾಮಿಯಾ ಮಸೀದಿಯಲ್ಲಿ ವಿಧ್ಯಾನಗರ ಯುವ ಬಳಗದಿಂದ ಹಣ್ಣು ಹಂಪಲುಗಳನ್ನು ವಿತರಿಸಿ ಬಾವೈಕ್ಯತೆ ತೊರಿಸಿದ್ದಾರೆ.

ಹಿಂದೂ - ಮುಸ್ಲಿಂ ಎಂಬ ಧರ್ಮದ ನಡುವೆ ವಿಷ ಬೀಜಗಳನ್ನು ಬಿತ್ತಿ. ಸಮಾಜದ ಶಾಂತಿಗೆ ದಕ್ಕೆ ಉಂಟು ಮಾಡುವವರ ಮದ್ಯ ಇಂತಹ ಪುಣ್ಯದ ಕಾರ್ಯ ಮಾಡುವ ಮೂಲಕ ವಿಧ್ಯಾನಗರ ಯುವ ಬಳಗದ ಯುವಕರು ಸಮಾಜಕ್ಕೆ ಮಾದರಿಯಾಗಿದ್ದಾರೆ.

ಉಪವಾಸ ಮಾಡುವ ಭಕ್ತರಿಗೆ ಹಣ್ಣು - ಹಂಪಲು ನೀಡುವುದು ಒಂದು ಪುಣ್ಯದ ಕಾರ್ಯವಾಗಿದೆ. ಪೌಷ್ಟಿಕಾಂಶಭರಿತ ಖರ್ಜೂರ ಕಲ್ಲಂಗಡಿ ಕಿತ್ತಳೆ ಬಾಳೆಹಣ್ಣು ಮತ್ತು ದಾಳಿಂಬೆ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಜಾಮಿಯಾ ಮಸೀದಿ ಧರ್ಮ ಗುರುಗಳು, ಸಕಲ ಭಕ್ತಾದಿಗಳು, ವಿಧ್ಯಾನಗರ ಯುವ ಮುಖಂಡರಾದ ಚಂದ್ರಶೇಖರ್ ಬೈರ್ನ,್ಗ ಎಂ.ಉದಯಕುಮಾ,್ಗ ಸಂಜಯ್ ಕುಮಾ,್ಗ ಶ್ಯಾಮ್ ಸುಂದ,್ಗ ಯಂಕಣ್ಣ, ಶಿವುಕುಮಾರ, ಸಂದೀಪ್, ಸಂಜಯ್ ಬಡ್ಡಪ್ಪ, ಪತ್ರಕರ್ತ ಎಸ್. ವಿಜಯಕುಮಾ,್ಗ ಮಸೀದಿ ಭಕ್ತಾದಿಗಳು, ಚಿಕ್ಕ ಮಕ್ಕಳು, ಇನ್ನೂ ಮುಂತಾದವರು ಉಪಸ್ಥಿತರಿದ್ದರು.

ದುಬೈನಲ್ಲಿ ಸಿಲುಕಿದ ಸಿಂಧನೂರಿನ ವೈದ್ಯ ಡಾ.ಕೆ.ಶಿವರಾಜ್

ಸಿಂಧನೂರು,ಮಾ.01-

ವಿಜಯರತ್ನ ಇಂಟರ್ ನ್ಯಾಷನಲ್ ಪ್ರಶಸ್ತಿ ಸ್ವೀಕರಿಸಲು ದುಬೈಗೆ ತೆರಳಿದ್ದ ಸಿಂಧನೂರಿನ ಮಕ್ಕಳ ತಜ್ಞ ಡಾ.ಕೆ.ಶಿವರಾಜ್ ಸೇರಿ ಕರ್ನಾಟಕದ 70 ಜನ ದುಬೈನಲ್ಲಿ ಸಿಲುಕಿದ್ದಾರೆ.

ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ 27ಕ್ಕೂ ಅಧಿಕ ಜನರಿಗೆ ವಿಆರ್ ಎಲ್ ಸಮೂಹ ಸಂಸ್ಥೆಯಿಂದ ದುಬೈನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿತ್ತು. ಅದರಲ್ಲಿ ಸಿಂಧನೂರಿನ ಸಹನಾ ಆಸ್ಪತ್ರೆಯ ಮಕ್ಕಳ ತಜ್ಞ ಡಾ.ಕೆ.ಶಿವರಾಜ್ ಅವರಿಗೆ ಪ್ರಶಸ್ತಿ ಲಭಿಸಿತ್ತು. ಈ ಹಿನ್ನಲೆಯಲ್ಲಿ ಡಾ.ಕೆ.ಶಿವರಾಜ್ ಹಾಗೂ ತಮ್ಮ ಪತ್ನಿ ಕೆ.ಜ್ಯೋತಿ ಅವರೊಂದಿಗೆ ಕಳೆದ ಕೆಲ ದಿನಗಳ

3ನೇ ಪುಟಕ್ಕೆ

ಸಿರವಾರ ಪಟ್ಟಣ ಪಂಚಾಯತಿಯಲ್ಲಿ ಶ್ರೀ ರೇಣುಕಾಚಾರ್ಯ ಜಯಂತಿ: ಸಮಾಜಕ್ಕೆ ಮಾದರಿ ಗುರುಗಳ ತತ್ವ - ಕೃಷ್ಣನಾಯಕ್

ಸಿರವಾರ,ಮಾ.01-

ಸ್ಥಳೀಯ ಪಟ್ಟಣ ಪಂಚಾಯತಿ ಕಾರ್ಯಾಲಯದಲ್ಲಿ ಇಂದು ಯುಗಧರ್ಮ ಗುರು, ಜಗದ್ಗುರು ಶ್ರೀ ರೇಣುಕಾಚಾರ್ಯ ಭಗವತ್ಪಾದರ ಜಯಂತಿಯನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.



ಕಾರ್ಯಕ್ರಮದ ಆರಂಭದಲ್ಲಿ ಜಗದ್ಗುರುಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಗೌರವ ಅರ್ಪಿಸಲಾಯಿತು. ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತ್ ಸದಸ್ಯರಾದ ಕೃಷ್ಣನಾಯಕ್ ಅವರು ಜಗದ್ಗುರುಗಳ ಜೀವನ ಸಂದೇಶ ಮತ್ತು ಸಮಾಜಕ್ಕೆ ಅವರ ಕೊಡುಗೆಯ ಕುರಿತು ಮಾತನಾಡಿದರು.ವಿಶ್ವಗುರುಗಳ ತತ್ವ: ಮಾತನಾಡಿದ ಕೃಷ್ಣನಾಯಕ್ ಅವರು, ಶ್ರೀ ರೇಣುಕಾಚಾರ್ಯರು ಕೇವಲ ಒಂದು ಸಮುದಾಯಕ್ಕೆ ಸೀಮಿತವಾದವರಲ್ಲ, ಅವರು ಇಡೀ ಮಾನವಕುಲಕ್ಕೆ ಶಾಂತಿ, ಸಮಾನತೆ ಮತ್ತು ಧರ್ಮದ ಹಾದಿಯನ್ನು ತೋರಿಸಿಕೊಟ್ಟ ವಿಶ್ವಗುರುಗಳು, ಎಂದು ಬಣ್ಣಿಸಿದರು.ಪ್ರಸ್ತುತ ಮೌಲ್ಯಗಳು: ಸಮಾಜದಲ್ಲಿ ನೈತಿಕ ಮೌಲ್ಯಗಳು ಕುಸಿಯುತ್ತಿರುವ ಈ ಕಾಲದಲ್ಲಿ ರೇಣುಕಾಚಾರ್ಯರ ತತ್ವಗಳು ಮತ್ತು ಅವರು ಬೋಧಿಸಿದ ಸಿದ್ಧಾಂತಗಳು ಇಂದಿಗೂ ಪ್ರಸ್ತುತವಾಗಿದ್ದು, ಪ್ರತಿಯೊಬ್ಬರೂ ಅದನ್ನು ಅಳವಡಿಸಿಕೊಳ್ಳಬೇಕು ಎಂದು ಪ್ರತಿಪಾದಿಸಿದರು.ಸೌಹಾರ್ದತೆ: ಗುರುಗಳು ಹಾಕಿಕೊಟ್ಟ ದಾರಿಯಲ್ಲಿ ನಡೆದು ಸಮಾಜದಲ್ಲಿ ಸೌಹಾರ್ದತೆ ಮತ್ತು ಭ್ರಾತೃತ್ವವನ್ನು

3ನೇ ಪುಟಕ್ಕೆ

ತಿಪ್ಪರಾಜು ಹವಾಲ್ದಾರ್ ಅದ್ದೂರಿ ಹುಟ್ಟುಹಬ್ಬ ಆಚರಣೆ

ರಾಯಚೂರು,ಮಾ.1-

ಗ್ರಾಮೀಣ ಮಾಜಿ ಶಾಸಕರಾದ ತಿಪ್ಪರಾಜು ಹವಾಲ್ದಾರ್ ಅವರ ಹುಟ್ಟುಹಬ್ಬವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲಾಯಿತು.



ನಗರದ ಐಡಿಎಂಸಿ ಲೇ ಔಟ್ ನಲ್ಲಿ ಇರುವ ಅವರ ನಿವಾಸದಲ್ಲಿ ಕಾರ್ಯಕರ್ತರ ಸಮ್ಮುಖದಲ್ಲಿ ಹುಟ್ಟುಹಬ್ಬ ಆಚರಣೆ ಮಾಡಲಾಯಿತು.ಅವರ ಹುಟ್ಟುಹಬ್ಬ ಅಂಗವಾಗಿ ಅನೇಕ ಸಾಮಾಜಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಬೃಹತ್ ಹಾರ ಹಾಕಿ

ಕೇಕ್ ಕತ್ತರಿಸುವ ಮೂಲಕ ತಿಪ್ಪರಾಜು ಅವರ ಹುಟ್ಟುಹಬ್ಬವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲಾಯಿತು.ಕಾರ್ಯಕರ್ತರು ನೆಚ್ಚಿನ ನಾಯಕನಿಗೆ ಕೇಕ್ ತಿನ್ನಿಸುವ ಮೂಲಕ ಶುಭಾಶಯಗಳು ಕೋರಿದರು. ಗ್ರಾಮೀಣ ಪ್ರದೇಶದಿಂದ ಅಪಾರ ಸಂಖ್ಯೆಯಲ್ಲಿ ಕಾರ್ಯಕರ್ತರು ಆಗಮಿಸಿದ್ದರು.

ಹುಟ್ಟುಹಬ್ಬದ ಸಮಾರಂಭದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಸೇರಿದ ಅಭಿಮಾನಿಗಳು, ತಮ ನೆಚ್ಚಿನ ನಾಯಕನ ಪರ ಘೋಷಣೆ ಕೂಗುತ್ತಾ ಪುಷ್ಪವೃಷ್ಟಿಯೊಂದಿಗೆ ವೇದಿಕೆಗೆ ಬರಮಾಡಿಕೊಂಡರು.


ತಿಪ್ಪರಾಜು ಹವಾಲ್ದಾರ್ ಅವರ ಹುಟ್ಟುಹಬ್ಬದ ಅಂಗವಾಗಿ ದನಿ ಫೌಂಡೇಶನ್ ಹಾಗೂ ತಾಲೂಕು ಅರೋಗ್ಯ ಇಲಾಖೆ ವತಿಯಿಂದ ಉಚಿತ ಅರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರ ನಡೆಯಿತು. ಲಲಿತಾ ವೃದ್ಧಶ್ರಮದಲ್ಲಿ ಅನ್ನ ಸಂತರ್ಪಣೆ

ಹಾಗೂ ಅರೋಗ್ಯ ತಪಾಸಣೆ ನಡೆಸಲಾಯಿತು. ಅದೇ ರೀತಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಚಿಕ್ಕಸೂಗೂರು ಗ್ರಾಮದಲ್ಲಿ ಅರೋಗ್ಯ ತಪಾಸಣೆ

ಹಾಗೂ ಅನ್ನಸಂತರ್ಪಣೆ ಮಾಡಲಾಯಿತು. ತಿಪ್ಪರಾಜು ಅವರ ನಿವಾಸಿದಲ್ಲಿ ಹುಟ್ಟುಹಬ್ಬದ ಆಗಮಿಸಿದ ಸರ್ವರಿಗೂ ಅನ್ನಸಂತರ್ಪಣೆ ವ್ಯವಸ್ಥೆ ಮಾಡಿದ್ದರು.

3ನೇ ಪುಟಕ್ಕೆ

ಉಪ್ಪಾರ ಸಮಾಜ ವತಿಯಿಂದ ಮಹಾಮಾತೆ ಬಂಗಾರಮ್ಮ ಮಾತಾಜೀ ಅವರಿಗೆ ಶ್ರದ್ಧಾಂಜಲಿ



ರಾಯಚೂರು, ಮಾ.1-

ಶ್ರೀ ಭಗೀರಥ ಗುರುಪೀಠದ ಜಗದ್ಗುರುಗಳಾದ ಶ್ರೀ ಶ್ರೀ ಡಾ, ಪುರುಶೋತ್ತಮಾನಂದಪುರಿ ಮಹಾಸ್ವಾಮಿಗಳಿಗೆ ಜನ್ಮ ನೀಡಿ ಉಪ್ಪಾರ ಸಮಾಜದ ಶ್ರೀ ಭಗೀರಥ ಗುರುಪೀಠ ಮಹಾಸಂಸ್ಥಾನದ ಜಗದ್ಗುರು ಮಾಡುವುದಕ್ಕೆ ತಮ್ಮ ಪುಣ್ಯ ಗರ್ಭದಿಂದ ಜನ್ಮ ನೀಡಿದ ಮಹಾಮಾತೆ ಬಂಗಾರಮ್ಮ ಮಾತಾಜಿ ಪೂಜ್ಯ ಶ್ರೀ ಹನುಮಂತಪ್ಪಸ್ವಾಮಿಗಳು ತಮ್ಮ ಮೊದಲ ಪುತ್ರರತ್ನರನ್ನು ಸನಾತನ ಹಿಂದೂ ಧರ್ಮ ಹಾಗೂ ಈ ಸೂರ್ಯವಂಶ ಶ್ರೀ ಭಗೀರಥ ಗುರುಪೀಠದ ಜಗದ್ಗುರುಗಳಾಗಲು ದಾನ ಮಾಡಿದ್ದರು.

ಫೆ. 16 ರಂದು ಬೆಳಿಗ್ಗೆ ಮಹಾಶಿವರಾತ್ರಿ ಜಾಗರಣೆ ಮಹಾ ಪೂಜೆ ಮಾಡುತ್ತ ಗುರು ಮಾತಾಜಿ ಪೂಜ್ಯ ಶ್ರೀಮತಿ ಬಂಗಾರಮ್ಮ ತಾಯಿಯವರು ಬ್ರಹ್ಮಲೀನರಾದ ಸುದ್ದಿ ಎಲ್ಲಾಕಡೆ ಹರಡಿ ಶ್ರೀ ಭಗೀರಥಗುರುಪೀಠದ ಅಪಾರ ಭಕ್ತರು ಕಂಬನಿ ಮಿಡಿದು ಸಂತಾಪ ಸೂಚಿಸಿ ಮಾತಾಜಿಯವರ ಅಂತಿಮ ದರ್ಶನ ಪಡೆದು ಧನ್ಯರಾಗಲು ಆಗಮಿಸಿ ಗೌರವ ಸಲ್ಲಿಸಿದರು. ತದ ನಿಮಿತ್ಯ ರಾಯಚೂರು ಉಪ್ಪಾರವಾಡಿಯ ಜಿಲ್ಲಾ ಉಪ್ಪಾರ ಸಮಾಜದ ವತಿಯಿಂದ ಶ್ರೀಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದಲ್ಲಿ ಶ್ರೀ ಭಗೀರಥ ಗುರುಪೀಠದ ಜಗದ್ಗುರುಗಳಾದ ಶ್ರೀ ಶ್ರೀ ಡಾ, ಪುರುಷೋತ್ತಮಾನಂದ ಪುರಿ ಮಹಾಸ್ವಾಮಿಗಳಿಗೆ ಜನ್ಮ ನೀಡಿದ ಶ್ರೀ ಬಂಗಾರ ಮ್ಮ ಮಾತಾಜಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಮಾಜದ ಜಿಲ್ಲಾಧ್ಯಕ್ಷ ಪಾಗುಂಟಪ್ಪ ಮಿರ್ಜಾ

3ನೇ ಪುಟಕ್ಕೆ

ಗುರುಮಠಕಲ್‌ನಲ್ಲಿ ವಿದ್ಯಾರ್ಥಿಗಳ ವಿಜ್ಞಾನ ಮಾದರಿಗಳ ಪ್ರದರ್ಶನ



ಗುರುಮಠಕಲ್: ಸಮಗ್ರ ಶಿಕ್ಷಣ ಕರ್ನಾಟಕ, ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಂಸ್ಕೃತಿಕ ಸಂಘ ಹಾಗೂ ಅಗಸ್ತ್ಯ ಅಂತರಾಷ್ಟ್ರೀಯ ಪ್ರತಿಷ್ಠಾನ ಸಹಯೋಗದಲ್ಲಿ ಗುರುಮಠಕಲ್ ಮಿನಿ ನಾವೀನ್ಯತೆ ಕೇಂದ್ರದ ವತಿಯಿಂದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಸಿದ್ದಾಪುರ್ ಬಿ, ನಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಪ್ರಯುಕ್ತ ಆವಿಷ್ಕಾರ ಮೇಳವನ್ನು ಆಯೋಜಿಸಲಾಯಿತು. ಕಾರ್ಯಕ್ರಮಕ್ಕೆ ಶಾಲೆಯ ಮುಖ್ಯಗುರುಗಳು ಶ್ರೀಮತಿ ದುರ್ಗಮ್ಮ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಎಸ್ ಡಿ ಎಂ ಸಿ ಅಧ್ಯಕ್ಷರು ಬಾಲರಾಜ್ ಹಾಗೂ ಅತಿಥಿಗಳಾಗಿ ಮಾಜಿ ಎಸ್ ಡಿ ಎಂ ಸಿ ಅಧ್ಯಕ್ಷರು ಶ್ರೀನಿವಾಸ್, ಮಿನಿ ನಾವೀನ್ಯತೆ ಕೇಂದ್ರದ ಮುಖ್ಯಸ್ಥರಾದ ನಾಗೇಶ್ ಡಿ, ಗ್ರಾಮ ಪಂಚಾಯತ್ ಜೆ ಇ ಆಲಿಂ ಕಾಕ 'ಲ್ರ್ಾ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯೋಜಕರಾದ ಚಂದ್ರಕಾತ್ ರೆಡ್ಡಿ, ಹಿರಿಯ ಶಿಕ್ಷಕಿ ಶ್ರೀಮತಿ ನಾಗೇಂದ್ರಮ್ಮ ಹಾಗೂ ಶಿಕ್ಷಕರಾದ ಶ್ರೀಶೈಲ್, ಗಂಗಮ್ಮ, ವೆಂಕಟ್ ರೆಡ್ಡಿ ಸೇರಿದಂತೆ ಹಲವರು ಭಾಗವಹಿಸಿದ್ದರು.

ಕನಸು ಕಾಣಿರಿ, ಆ ಕನಸುಗಳನ್ನು ಆಲೋಚನೆಗಳಾಗಿ ಮಾಡಿ, ಆಲೋಚನೆಗಳನ್ನು ಕಾರ್ಯಗಳಾಗಿ ರೂಪಿಸಿ.

ಮಾತನಾಡಿದ ಶ್ರೀ ನಾಗೇಶ್ ಡಿ ಅವರು, ಮಿನಿ ನಾವೀನ್ಯತೆ ಕೇಂದ್ರದ ವತಿಯಿಂದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಸುಮಾರು 45 ರಿಂದ 50 ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಲಾಗಿದ್ದು, ಪ್ರತಿಯೊಂದು ಮಾದರಿಗೂ ತನ್ನದೇ ಆದ ವೈಶಿಷ್ಟವಿದೆ ಎಂದು ಹೇಳಿದರು. ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಸಂಶೋಧನಾ ಮನೋಭಾವ ಹಾಗೂ ವಿಜ್ಞಾನಾಸಕ್ತಿ ಬೆಳೆಸುವುದೇ ಈ ಕಾರ್ಯಕ್ರಮದ ಉದ್ದೇಶ ಎಂದರು. ವಿಜ್ಞಾನ ಜೀವನದ ಅವಿಭಾಜ್ಯ ಅಂಗ ದುರ್ಗಮ್ಮ

ಅಧ್ಯಕ್ಷೀಯ ನುಡಿಗಳಲ್ಲಿ ಮಾತನಾಡಿದ ಶ್ರೀಮತಿ ದುರ್ಗಮ್ಮ ಮೇಡಂ, ನಮ್ಮ ದೈನಂದಿನ ಜೀವನದಲ್ಲಿ ವಿಜ್ಞಾನ ಎಲ್ಲೆಡೆ ಅಡಕವಾಗಿದೆ. ಅದನ್ನು ಅರ್ಥಮಾಡಿಕೊಂಡು ಜೀವನದಲ್ಲಿ ಬಳಸಿಕೊಳ್ಳುವ ಅಭ್ಯಾಸ ಬೆಳೆಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದ್ದು, ವಿಜ್ಞಾನಾಸಕ್ತಿ ಹೆಚ್ಚಿಸುವ ಪ್ರೇರಣಾದಾಯಕ ಕಾರ್ಯಕ್ರಮವಾಗಿ ಮೇಳ ಯಶಸ್ವಿಯಾಯಿತು.



ತಾಯಿ ಹಾಗೂ ಶಿಕ್ಷಕನ ಋಣ ತೀರಿಸಲು ಎಂದಿಗೂ ಸಾಧ್ಯವಿಲ್ಲ: ಸಂಗನಬಸವ ಶ್ರೀ

ವಿಜಯಪುರ: ಜಗತ್ತಿನಲ್ಲಿ ತಾಯಿ ಋಣ ಹಾಗೂ ಕಲಿಸಿದ ಶಿಕ್ಷಕನ ಋಣ ಯಾವ ಕಾಲಕ್ಕೂ ತೀರಿಸಲು ಸಾಧ್ಯವಿಲ್ಲದಂತಹ ಅದ್ಭುತ ತ್ಯಾಗಿ ಜೀವಿ ಇವರಿಬ್ಬರು. ನಾನು ಇಂತಹ ಶಿಕ್ಷಕರ ಕೈಯಲ್ಲೇ ಕಲಿತು ಒಂದು ಮಠದ ಸ್ವಾಮೀಜಿಯಾಗಿದ್ದೇನೆ ಎಂಬ ಹೆಮ್ಮೆ ನನಗಿದೆ ಎಂದು ಮನಗೂಳಿ ಹಿರೇಮಠ ಶ್ರೀ.ಷ. ಬ್ರ.ಅಭಿನವ ಸಂಗನಬಸವ ಶಿವಾಚಾರ್ಯರು ಹೇಳಿದರು.

ಬಸವನ ಬಾಗೇವಾಡಿ ತಾಲೂಕಿನ ಮನಗೂಳಿಯ ಶ್ರೀ ಎಸ್.ಬಿ. ಪಾಟೀಲ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯದ 2003-04ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ 2005-06ನೇ ಸಾಲಿನ ಪಿಯುಸಿ ವಿದ್ಯಾರ್ಥಿಗಳಿಂದ ಹಮ್ಮಿಕೊಂಡಿದ್ದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದ ಅವರು, ದೇಶದ ಭವಿಷ್ಯದ ಪೀಳಿಗೆ ಯನ್ನು ತಮ್ಮ ಜ್ಞಾನದಿಂದ ಶ್ರೀಮಂ ತಗೊಳಿಸುವ ಮುಖಾಂತರ ದೇಶದ ಅಡಿಪಾಯವನ್ನು ನಿರ್ಮಿಸುವಲ್ಲಿ ಶಿಕ್ಷಕರು ಪ್ರಮುಖ ಪಾತ್ರ ವಹಿಸುತ್ತಾರೆ ಎಂದರು.

ಶಿಕ್ಷಕ ಎಸ್.ಎಸ್. ಬಿರಾದಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಈಗಿನ ವಿದ್ಯಾರ್ಥಿಗಳು ವ್ಯರ್ಥ ಸಮಯ ಹಾಳು ಮಾಡುತ್ತಿದ್ದಾರೆ. ಕೊಟ್ಟ ಸಮಯವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕು ಎಂದರು.

ಶಿಕ್ಷಕ ಬಿ.ಬಿ. ಲಗಟಿಗೇರ ಅಧ್ಯಕ್ಷತೆ ವಹಿಸಿ ಮಾತನಾಡಿ, ಹಳೆಯ ವಿದ್ಯಾರ್ಥಿಗಳು ಗುರುವಂದನವನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ. ಅವರು ವಿದ್ಯಾರ್ಥಿ ಜೀವನವನ್ನು ಮುಗಿಸಿಕೊಂಡು ಒಳ್ಳೆಯ ಕೆಲಸ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ರೈತರಾಗಿದ್ದಾರೆ, ಪೊಲೀಸರಾಗಿದ್ದಾರೆ, ಇಂಜಿನಿಯರ್ ಗಳಾಗಿದ್ದಾರೆ, ವಕೀರಾಗಿದ್ದಾರೆ, ಶಿಕ್ಷಕರಾಗಿದ್ದಾರೆ. ಹೀಗೆ ಅವರ ಮಕ್ಕಳಿಗೂ ಉನ್ನತ ಸ್ಥಾನ ಸಿಗಲಿ, ಮಕ್ಕಳಿಗೆ ಸಂಸ್ಕಾರ ಕೊಡುವಂತಾಗಲಿ ಎಂದರು.

ಶಿಕ್ಷಕರಾದ ಎಂ.ಎಸ್.ಮಾದರ, ಸಿ.ಬಿ.ಸಜ್ಜನ, ಬಿ.ಎಚ್.ಹಿರೇಮಠ, ಎಂ.ಬಿ.ಗುಮ್ಮಡಿ, ಎಸ್.ಬಿ. ಬಿರಾದಾರ, ಪಿ.ಟಿ. ರಾಠೋಡ. ಆರ್.ಕೆ. ಹನಗಂಡಿ, ಎಂ.ಎಸ್. ನಾಯಕ, ಬಿ.ಎಂ. ಪಾಟೀಲ. ಡಿ.ಎಸ್. ಬಂಡಗಾರ. ಎಸ್.ಬಿ. ಬಿಳೂರ, ಐ.ಡಿ. ಚೆನ್ನಾಳ, ಸಿಪಾಯಿಗಳಾದ ಕೆ.ಟಿ. ಕರಾಬಿ, ಸಂಗಪ್ಪ ಹಡಪದ, ಎಂ.ಎಲ್. ಮನಗೂಳಿ, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



ಅಸ್ಪೃಶ್ಯತೆ ನಿವಾರಣೆ ಮತ್ತು ಜಾತಿಭೇದ ವಿರುದ್ಧ ಜಾಗೃತಿ ಬೀದಿ ನಾಟಕ

ಯಾದಗಿರಿ: ಕೊಯಿಲೂರು ಗ್ರಾಮದ ಹಣಮಂತ ದೇವಸ್ಥಾನ ಆವರಣದಲ್ಲಿ ಗುರುವಾರ ನಡೆದ ಬೀದಿ ನಾಟಕ ಕಾರ್ಯಕ್ರಮವು ಅಸ್ಪೃಶ್ಯತೆ ನಿವಾರಣೆ ಮತ್ತು ಜಾತಿ-ಭೇದ ವಿರುದ್ಧ ಜಾಗೃತಿ ಮೂಡಿಸುವ ಮಹತ್ವದ ವೇದಿಕೆಯಾಗಿ ಪರಿಣಮಿಸಿತು. ಈ ಕಾರ್ಯಕ್ರಮವನ್ನು ಸ್ವರ ಸಾಮ್ರಾಟ ಸಂಗೀತ ಸಾಮಾಜಿಕ ಹಾಗೂ ಸಂಸ್ಕೃತಿಕ ಕಲಾ ಸಂಸ್ಥೆ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಂಯುಕ್ತವಾಗಿ ಆಯೋಜಿಸಿತು.

ಸಂಸ್ಥೆಯ ಅಧ್ಯಕ್ಷ ಶರಣು ಎಸ್. ನಾಟೇಕರ್ ಉದ್ಬೋಧನೆ

''ಮಾನವರೆಲ್ಲ ಒಂದೇ ಬಂಧು. ನಾವು ಒಗ್ಗಟ್ಟಿನಿಂದ ಬದುಕಬೇಕು. ಯಾವುದೇ ಜಾತಿ ಭೇದ ಅಥವಾ ಭೇದಾಭಿಪ್ರಾಯಗಳನ್ನು ಸಾರ್ವಜನಿಕ ಜಾಗಗಳಲ್ಲಿ ತೋರಬಾರದು. ಒಟ್ಟಾಗಿ ಜಾಗೃತಿ ಮೂಡಿಸಿ, ಸಮುದಾಯವನ್ನು ಬಲಪಡಿಸೋಣ.''

ಬೀದಿ ನಾಟಕವು ಗ್ರಾಮಸ್ಥರಲ್ಲಿ ವಿಶೇಷ ಉತ್ಸಾಹ ಮೂಡಿಸಿತು. ಮಲ್ಲಪ್ಪ ಚಟ್ಟೇರರ್ಕ,ರ್ ಮಲ್ಲಿಕಾರ್ಜುನ ಕಾಗಿ, ಶಿವಮ್ಮ ಮಾಳುರೂ, ಗಂಗಿಮಾಳಮ್ಮ ಶಿವುಕುಮಾರ್ ಸೇರಿದಂತೆ ಅನೇಕ ಗ್ರಾಮಸ್ಥರು ಕಾರ್ಯಕ್ರಮವನ್ನು ನೋಡಿದರು ಮತ್ತು ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು. ನಾಟಕದಲ್ಲಿ ಅಸ್ಪೃಶ್ಯತೆ ತ್ಯಾಗ, ಜಾತಿಭೇದ ವಿರೋಧ ಮತ್ತು ಒಗ್ಗಟ್ಟಿನ ಮಹತ್ವವನ್ನು ಮನೋಜ್ಞ ರೀತಿಯಲ್ಲಿ ಪ್ರದರ್ಶಿಸಲಾಗಿತ್ತು.

ಕಾರ್ಯಕ್ರಮದ ಕೊನೆಯಲ್ಲಿ ಸಂಘಟಕರಾದ ಸಂಸ್ಥೆಯವರು, ಇಂತಹ ಶೈಕ್ಷಣಿಕ ಹಾಗೂ ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ಆಯೋಜಿಸುವ ನಿರ್ಧಾರವನ್ನೂ ಘೋಷಿಸಿದರು.

ಜನರಲ್ಲಿ ಜಾತಿಭೇದ ಮತ್ತು ಅಸ್ಪೃಶ್ಯತೆಯ ವಿರೋಧದಲ್ಲಿ ಜಾಗೃತಿ ಮೂಡಿಸುವುದು, ಸಮುದಾಯದಲ್ಲಿ ಒಗ್ಗಟ್ಟಿನ ಸಂದೇಶವನ್ನು ಹರಡುವುದು.

ಉತ್ತಮ ಶಿಕ್ಷಕರಾಗಲು ತರಬೇತಿಯ ಜ್ಞಾನ ಅತಿಮುಖ್ಯ :ದೊಡ್ಡಮನಿ



ಸೈದಾಪುರ: ಉತ್ತಮ ಶಿಕ್ಷಕರು ನಿವಾಗಬೇಕು. ಇದಕ್ಕಾಗಿ ತರಬೇತಿಯಲ್ಲಿ ಪಡೆದ ಜ್ಞಾನವನ್ನು ಮುಂದಿನ ವೃತ್ತಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಾಲಾ ಮುಖ್ಯಗುರು ಹಾಗೂ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾ ಅಧ್ಯಕ್ಷ ಯಂಕಪ್ಪ ದೊಡ್ಡಮನಿ ಅಭಿಪ್ರಾಯಪಟ್ಟರು.

ಪಟ್ಟಣದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 33 ದಿನಗಳವರೆಗೆ ನಿಕಟ ಸೇವಾ ತರಬೇತಿಗೆ ನಿಯೋಜನೆಗೊಂಡು ಪೂರ್ಣಗೊಳಿಸಿದ ವಿದ್ಯಾ ವರ್ಧಕ ಡಿ.ಎಲ್.ಇಡಿ ಕಾಲೇಜಿನ ಪ್ರಶಿಕ್ಷಣಾರ್ಥಿಗಳ ಬೀಳ್ಕೊಡಿಗೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಪ್ರಮಾಣ ಪತ್ರದ ಶಿಕ್ಷಕರು ನೀವಾಗದೆ. ಮಕ್ಕಳನ್ನು ನಮ್ಮನ್ನು ಗುರುತಿಸುವ ಶಿಕ್ಷಕರಾಗಬೇಕು. ಇದಕ್ಕಾಗಿ ಸತತ ಅಧ್ಯಯನ, ಹಿರಿಯ ಶಿಕ್ಷಕರ ಮಾರ್ಗದರ್ಶನ ಹಾಗೂ ಸಲಹೆಯನ್ನು ಪಡೆದುಕೊಳ್ಳಬೇಕು. ಇಲ್ಲಿ ಪಡೆದ ಅನುಭವವನ್ನು ಬಳಕೆ ಮಾಡಿಕೊಂಡು ಶೈಕ್ಷಣಿಕ ಅಭಿವೃದ್ಧಿಯಲ್ಲಿ ನಿಮ್ಮದೆಯಾದ ಪ್ರಾಮುಖ್ಯತೆಯನ್ನು ನೀಡಬೇಕು ಎಂದು ಕಿವಿ ಮಾತುಗಳನ್ನು ಹೇಳಿದರು.

ಶಾಲಾ ಶಿಕ್ಷಕರಾದ ಶಿವಕಾಂತಮ್ಮ, ಶಾಂತ, ದೀಪಿಕಾ, ಮಹಿಪಾಲರೆಡ್ಡಿ, ಬಲರಾಮ ಚವ್ಹಾಣ, ಶ್ರೀದೇವಿ, ರತ್ನಮ್ಮ, ಗೀತಾ, ಪ್ರಶಿಕ್ಷಣಾರ್ಥಿಗಳು, ವಿದ್ಯಾರ್ಥಿಗಳು ಸೇರಿದಂತೆ ಇತರರಿದ್ದರು.



ಅಕ್ರಮ ಪಡಿತರ ಅಕ್ಕಿ ಸಾಗಣೆ: 5,18,308 ಮೌಲ್ಯದ 14,980 ಕೆಜಿ ಪಡಿತರ ಅಕ್ಕಿ ವಶಕ್ಕೆ ಪಡೆದ ಸಾವಳಗಿ ಪೋಲಿಸರು

ಜಮಖಂಡಿ: ಅನ್ನಭಾಗ್ಯ ಯೋಜನೆಯ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ ವೇಳೆಯಲ್ಲಿ ಆಹಾರ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿ 14980 ಕೆಜಿ ಪಡಿತರ ಅಕ್ಕಿ ಹಾಗೂ ಲಾರಿಯನ್ನು ವಶಕ್ಕೆ ಪಡೆದುಕೊಂಡಿದ್ದಾರೆ.


ಬಿದರಿ ಚಿಕ್ಕಲಕಿ ಸಾವಳಗಿ ಮಾರ್ಗವಾಗಿ ತೆಲಸಂಗ ಕಡೆಗೆ ಹೋಗುವಾಗ ಸಾವಳಗಿ ಸರಕಾರಿ ಆಸ್ಪತ್ರೆಯ ಎದುರಿಗೆ ತೆಲಸಂಗ ರಸ್ತೆಯ ಮೇಲೆ ಅಧಿಕಾರಿಗಳು ದಾಳಿ ನಡೆಸಿ ಅಂದಾಜು 518308 ಮೌಲ್ಯದ 14980 ಕೆಜಿ ಪಡಿತರ ಅಕ್ಕಿ ಸಹಿತ ಲಾರಿಯನ್ನು ವಶಪಡಿಸಿಕೊಂಡಿದ್ದಾರೆ.

ಅನಧಿಕೃತವಾಗಿ ಪಡಿತರ ಅಕ್ಕಿಯನ್ನು ಲಾರಿಯಲ್ಲಿ ಲೋಡ್ ಮಾಡಿಕೊಂಡು ಹೋಗುವ ಸಂಧರ್ಭದಲ್ಲಿ ಖಚಿತ ಮಾಹಿತಿಯ ಮೇರೆಗೆ ಆಹಾರ ಇಲಾಖೆಯ ಶಿರಸ್ತೇದಾರ್ ಬಸವರಾಜ ತಾಳಿಕೋಟಿ, ಆಹರ ನೀರಿಕ್ಷಕ ಆನಂದ ರಾಠೋಡ ಹಾಗೂ ಸಾವಳಗಿ ಶಿವಾನಂದ ಭಜಂತ್ರಿ,ಉತ್ನಾಳ ಅವರು ದಾಳಿ ನಡೆಸಿ, ಪರಿಶೀಲಿಸಿದಾಗ ಪ್ಲಾಸ್ಟಿಕ್ ಚೀಲಗಳಲ್ಲಿ ಅನ್ನಭಾಗ್ಯ ಯೋಜನೆಯ ಅಕ್ಕಿ ಕಂಡು ಬಂದಿವೆ.

ಲಾರಿಯ ಚಾಲಕ ಹಸನ ಮೋದಿನಸಾಭ ಜಮಾಧಾರನನ್ನು ವಿಚಾರಿಸಿದಾಗ ಅಕ್ಕಿಯ ಬಗ್ಗೆ ಯಾವುದೇ ದಾಖಲೆ, ರಶೀದಿ ಇರದಿದ್ದ ಕಾರಣದಿಂದಾಗಿ ಅನಧಿಕೃತವಾಗಿ ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡುವುದು ಸ್ಪಷ್ಟವಾಗಿ ಕಂಡು ಬಂದಿದೆ. ಹೀಗಾಗಿ 518308 ಲಕ್ಷ ಮೌಲ್ಯದ 14989ಕೆಜಿ ಪಡಿತರ ಅಕ್ಕಿ ವಶಕ್ಕೆ ಪಡೆದು ಚಾಲಕನ ವಿರುದ್ಧ ಆಹಾರ ಇಲಾಖೆ ಸಿರಸ್ತೆದಾರ ಬಸವರಾಜ ತಾಳಿಕೋಟಿ ಅವರು ಸಾವಳಗಿ ಪೆಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಯಾದಗಿರಿ ಜಿಲ್ಲೆಯಲ್ಲಿ ಹೋಳಿ ಹಬ್ಬಕ್ಕೆ ಕಟ್ಟುನಿಟ್ಟಿನ ಸಿದ್ಧತೆ

ಯಾದಗಿರಿ: ಬಣ್ಣಗಳ ಹಬ್ಬ ಹೋಳಿ ಸಮೀಪಿಸುತ್ತಿರುವ ಹಿನ್ನೆಲೆ ಜಿಲ್ಲೆಯಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡಲು ಸಮಗ್ರ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ತಿಳಿಸಿದ್ದಾರೆ.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಶಾಂತಿ ಸಮಿತಿ ಸಭೆಗೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಾರ್ಚ್ 3ರಂದು ಕಾಮದಹನ ಹಾಗೂ ಮಾರ್ಚ್ 4ರಂದು ಬಣ್ಣಗಳಾಟ ನಡೆಯ ಲಿದ್ದು, ಈ ಸಂದರ್ಭದಲ್ಲಿ ಎಲ್ಲ ಧರ್ಮೀಯರು ಪರಸ್ಪರ ಗೌರವ, ಸಹಿಷ್ಣುತೆ ಮತ್ತು ಸಹಕಾರದೊಂದಿಗೆ ಹಬ್ಬ ಆಚರಿಸಬೇಕು ಎಂದು ಮನವಿ ಮಾಡಿದರು. ''ಜಿಲ್ಲೆಯಲ್ಲಿ ಹಿಂದಿನಿದಲೂ ಹಬ್ಬಗಳನ್ನು ಶಾಂತಿ ಮತ್ತು ಭ್ರಾತೃತ್ವದ ವಾತಾವರಣದಲ್ಲಿ ಆಚರಿಸಲಾಗುತ್ತಿದೆ. ಅದೇ ಸಂಪ್ರದಾಯ ಮುಂದುವರಿಯಬೇಕು'' ಎಂದು ಹೇಳಿದರು. ಪಿಯುಸಿ ಪರೀಕ್ಷೆಗಳು ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗದತೆ ನೋಡಿಕೊಳ್ಳಬೇಕು. ಒತ್ತಾಯಪೂರ್ವಕವಾಗಿ ಬಣ್ಣ ಹಚ್ಚುವುದು, ಅಸಭ್ಯ ವರ್ತನೆ ತೋರಿಸುವುದು, ರಾಸಾಯನಿಕಯುಕ್ತ ಬಣ್ಣ ಬಳಕೆ ಮಾಡುವುದು ಹಾಗೂ ಕುಡಿಯುವ ನೀರಿನ ಮೂಲಗಳಲ್ಲಿ ಬಣ್ಣ ಮಿಶ್ರಣ ಮಾಡುವುದು ನಿಷೇಧಿತವಾಗಿದ್ದು, ಉಲ್ಲಂಘನೆ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಎಚ್ಚರಿಸಿದರು. ಬ್ರಿಡ್ಜ್-ಕವ್ಹ್-ಬ್ಯಾರೇಜ್ ಪ್ರದೇಶದಲ್ಲಿ ಅಪಾಯಕಾರಿ ರೀತಿಯ ಈಜು ಹಾಗೂ ಸ್ನಾನವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ತಿಳಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಮಾತನಾಡಿ, ಹೋಳಿ ಹಬ್ಬದ ಸಂದರ್ಭದಲ್ಲಿ ಜಿಲ್ಲೆಯಾದ್ಯಂತ ಸಮಗ್ರ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗುತ್ತಿದೆ ಎಂದರು. ಪ್ರಮುಖ ವೃತ್ತಗಳು, ಧಾರ್ಮಿಕ ಸ್ಥಳಗಳು ಹಾಗೂ ಸಂವೇದನಾಶೀಲ ಪ್ರದೇಶಗಳಲ್ಲಿ ಹೆಚ್ಚುವರಿ ಭದ್ರತೆ ಒದಗಿಸಲಾಗುವುದು. ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ವಹಿಸಲಾಗಿದ್ದು, ಶಾಂತಿ ಕದಡುವ ವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು. ಡಿಜೆ ಹಾಗೂ ಧ್ವನಿವರ್ಧಕಗಳ ಬಳಕೆಯಲ್ಲಿ ನಿಯಮ ಪಾಲನೆ ಕಡ್ಡಾಯವಾಗಿದ್ದು, ಪ್ರಚೋದನಕಾರಿ ಹಾಡುಗಳನ್ನು ಬಳಸದಂತೆ ಸೂಚನೆ ನೀಡಿದರು. ಸಭೆಯಲ್ಲಿ ಡಿವೈಎಸ್ಪಿಗಳಾದ ಶ್ರೀ ಸುರೇಶ್ ಮತ್ತು ಶ್ರೀ ಜಾವೇದ್ ಇನಾಮದಾರ, ಹಿಂದೂ ಸಮಾಜದ ಮುಖಂಡರಾದ ಶರಣಪ್ಪ ಗುಳಿಗಿ, ಮರೆಪ್ಪ ಚಟ್ಟರ್ಕರ್, ಶರಣಪ್ಪ ಜಾಕಾ, ಮಲ್ಲಿಕಾರ್ಜುನ ಕ್ರಾಂತಿ, ಭೀಮು ಪೂಜಾರಿ, ಮುಸ್ಲಿಂ ಸಮಾಜದ ಮುಖಂಡರಾದ ಸಬ್ದಾನ್ ಮೂಸಾ, ಹಾಫೀಜ್ ಪಟೇಲ್, ಜಿಲಾನಿ, ಬಾಬಾ ಸೇರಿದಂತೆ ಹಲವರು ಭಾಗವಹಿಸಿ ತಮ್ಮ ಸಲಹೆ-ಸೂಚನೆಗಳನ್ನು ನೀಡಿದರು. ಹಬ್ಬದ ದಿನ ಬೆಳಿಗ್ಗೆ 7ರಿಂದ ಮಧ್ಯಾಹ್ನ 1ರವರೆಗೆ ಮಾತ್ರ ಬಣ್ಣಗಳಾಟ ನಡೆಸಬೇಕು. ಮಹಿಳೆಯರು, ಹಿರಿಯರು, ಮಕ್ಕಳು ಹಾಗೂ ಅನ್ಯಧರ್ಮೀಯರಿಗೆ ತೊಂದರೆಯಾಗದತೆ ವರ್ತಿಸಬೇಕು. ಹಬ್ಬದ ಸಂದರ್ಭದಲ್ಲಿ ಮದ್ಯಪಾನ ಹಾಗೂ ಅಕ್ರಮ ಮದ್ಯ ಮಾರಾಟ ತಡೆಯಲು ಕಟ್ಟುನಿಟ್ಟಿನ ಕ್ರಮ ಜಾರಿಯಲ್ಲಿರುತ್ತದೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದರು. ಒಟ್ಟಾರೆ, ಹೋಳಿ ಹಬ್ಬವನ್ನು ಸಂತಸ, ಶಿಸ್ತಿನ ಪಾಲನೆ ಹಾಗೂ ಪರಸ್ಪರ ಸೌಹಾರ್ದತೆಯೊಂದಿಗೆ ಆಚರಿಸುವ ಮೂಲಕ ಜಿಲ್ಲೆಯ ಶಾಂತಿ-ಸಹಿಷ್ಣುತೆಯ ಪರಂಪರೆಯನ್ನು ಕಾಪಾಡಲು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಸಜ್ಜಾಗಿದೆ.

ವಡಗೇರಾ ಪಟ್ಟಣದಲ್ಲಿ ಚರಂಡಿ ಅವ್ಯವಸ್ಥೆ ತಾತ್ಕಾಲಿಕ ಪರಿಹಾರ ಅಗತ್ಯ

ವಡಗೇರಾ: ಪಟ್ಟಣದ ಮುಖ್ಯ ಚರಂಡಿ ಮತ್ತು ಸ್ವಚ್ಛತಾ ವ್ಯವಸ್ಥೆಯಲ್ಲಿ ತೀವ್ರ ನಿರ್ಲಕ್ಷ್ಯ ವ್ಯಕ್ತವಾಗಿದ್ದು, ಸಾರ್ವಜನಿಕರ ಆರೋಗ್ಯ ಮತ್ತು ಸುರಕ್ಷತೆಗೆ ಅಪಾಯ ಉಂಟಾಗುತ್ತಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ, ಕಲ್ಯಾಣ ಕರ್ನಾಟಕ ವಿಭಾಗದ ಅಧ್ಯಕ್ಷ ಶರಣು ಇಟಗಿ ತೀವ್ರವಾಗಿ ಒತ್ತಾಯ ಮಾಡಿದ್ದಾರೆ.

ಪಟ್ಟಣದ ಮೂರು ಮತ್ತು ನಾಲ್ಕನೇ ವಾರ್ಡ್ ಗಳಲ್ಲಿ ಬಾಶುಮಿಯಾ ನಾಯ್ಕೋಡಿ ನಿವಾಸದಿಂದ ಶಿವಪುತ್ರಪ್ಪ ಅಂಗಡಿ ಕಾಂಪ್ಲೆಕ್ಸ್ ವರೆಗೆ ಪ್ರಸಕ್ತ ಮುಖ್ಯ ಚರಂಡಿ ಸಂಪೂರ್ಣ ಹಾಳಾಗಿ, ಹರಿದ ನೀರು ಮತ್ತು ಕಸದ ರಾಶಿಯಿಂದ ರಸ್ತೆಗಳಲ್ಲಿ ತೀವ್ರ ತೊಂದರೆ ಉಂಟಾಗಿದೆ.


ಪಟ್ಟಣದ ನಿವಾಸಿಗಳು ಬಸವರಾಜ್ ಮಾತಪಳ್ಳಿ ಮತ್ತು ಮಲ್ಲುನಾಯಕ್ ಇಟಗಿಈ ತೀವ್ರ ಪರಿಸ್ಥಿತಿಯನ್ನು ದೃಢಪಡಿಸಿದ್ದಾರೆ. ಸಂಬಂಧಪಟ್ಟ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಈ ಘಟನೆಗೆ ಗಮನ ಹರಿಸದಿರುವುದು ಸಾರ್ವಜನಿಕರಲ್ಲಿ ಆಕ್ರೋಶವನ್ನು ಉಂಟುಮಾಡಿದೆ.

ಸ್ವಚ್ಛತೆ ಇಲ್ಲದ ಕಾರಣ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗಿದ್ದು, ವಿವಿಧ ರೋಗಗಳು ಹರಡುವ ಪರಿಸ್ಥಿತಿ ತೀವ್ರವಾಗುತ್ತಿದೆ. ಮುಖ್ಯ ರಸ್ತೆಗಳು ಕಸದ ರಾಶಿಯಿಂದ ಮುಚ್ಚಿ, ಸಾರ್ವಜನಿಕರು ದುರಂತಕರ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ.

ಶರಣು ಇಟಗಿ ಹೇಳಿದರು:

ಸಂಬಂಧಿತ ಅಧಿಕಾರಿಗಳು ತಕ್ಷಣದಿಂದ ಕಾರ್ಯನಿರ್ವಹಿಸಿ, ಪಟ್ಟಣದಲ್ಲಿ ಸಮಗ್ರ ಸ್ವಚ್ಛತಾ ವ್ಯವಸ್ಥೆ ಮತ್ತು ಚರಂಡಿ ನಿರ್ಮಾಣಕ್ಕೆ ಆದ್ಯತೆ ನೀಡಬೇಕು. ಕ್ರಮ ಕೈಗೊಂಡಿಲ್ಲದಿದ್ದರೆ, ನಾವು ಪಟ್ಟಣದ ಸಾರ್ವಜನಿಕರೊಂದಿಗೆ ಸೇರಿ ತೀವ್ರ ಹೋರಾಟ ನಡೆಸಲು ಸಿದ್ಧರಾಗಿದ್ದೇವೆ.''

ಪಟ್ಟಣದ ನಿರ್ಲಕ್ಷ್ಯವು ಮುಂದುವರಿದರೆ, ಸಾರ್ವಜನಿಕರ ಆರೋಗ್ಯ ಮತ್ತು ಸ್ಥಳೀಯ ಪರಿಸರ ಭದ್ರತೆಗೆ ತೀವ್ರ ಅಪಾಯ ಉಂಟಾಗಬಹುದಾಗಿದೆ ಎಂದು ಅವರು ಎಚ್ಚರಿಸಿದ್ದಾರೆ.



ಸಾಹಿತಿ ಜಾವೀದ ಹುಸೇನ ಹವಲ್ದಾರ ರವರಿಗೆ ಭವ್ಯ ಸನ್ಮಾನ

ಸುರಪುರ: ಆಧ್ಯಾತ್ಮಿಕ ಚೈತನ್ಯ, ಶರಣ ತತ್ವದ ಪ್ರಭಾವ ಮತ್ತು ಸಾಹಿತ್ಯ ಸಂಭ್ರಮಗಳ ಸಮನ್ವಯವಾಗಿ ಸುರಪುರ ಸಂಸ್ಥಾನ ಅಧೀನದಲ್ಲಿರುವ ಶ್ರೀ ಕಡ್ಲೆಪ್ಪ ನಿಷ್ಠಿ ವಿರಕ್ತ ಮಠದಲ್ಲಿ ಬುಧವಾರ ಭವ್ಯ ಹಾಗೂ ಅರ್ಥಪೂರ್ಣ ಕಾರ್ಯಕ್ರಮಗಳು ಅತ್ಯಂತ ಶ್ರದ್ಧಾ-ಭಕ್ತಿಭಾವದಿಂದ ನೆರವೇರಿದವು. ಕಬಾಡಗೆರಾದ 'ಲ್ಲಿರುವ ಮಠ ಆವರಣದಲ್ಲಿ ನಡೆದ ಈ ಮಹೋತ್ಸವದಲ್ಲಿ ನೂರಾರು ಭಕ್ತರು, ಶರಣರು, ಗಣ್ಯರು ಹಾಗೂ ಸಾಹಿತ್ಯಾಸಕ್ತರು ಭಾಗವಹಿಸಿ ಕಾರ್ಯಕ್ರಮದ ವೈಭವ ಹೆಚ್ಚಿಸಿದರು. ಕಾರ್ಯಕ್ರಮದ ಅಂಗವಾಗಿ ಲಿಂ. ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ಮಹಾಸ್ವಾಮಿ ಗಳವರ 50ನೇ ಸುವರ್ಣ ಪುಣ್ಯಸ್ಮರಣೋತ್ಸವವನ್ನು ಸ್ಮರಿಸಲಾಯಿತು. ಅವರ ಶರಣ ತತ್ವಪ್ರಚಾರ, ಸಮಾಜಮುಖಿ ಚಿಂತನೆಗಳು ಹಾಗೂ ಧಾರ್ಮಿಕ ಪರಂಪರೆಯ ಸ್ಥೈರ್ಯಕ್ಕಾಗಿ ಸಲ್ಲಿಸಿದ ಅಪಾರ ಕೊಡುಗೆಗಳನ್ನು ವಕ್ತಾರರು ಕೊಂಡಾಡಿದರು. ಇದೇ ಸಂದರ್ಭದಲ್ಲಿ ಪೂಜ್ಯ ಶ್ರೀ ಮ.ನಿ.ಪ್ರ. ಪ್ರಭುಲಿಂಗ ಮಹಾಸ್ವಾಮಿಗಳವರ ಷಷ್ಠ್ಯಬ್ದಪೂರ್ತಿ ಸಮಾರಂಭ, 25ನೇ ರಜತ ಪಟ್ಟಾಧಿಕಾರ ಮಹೋತ್ಸವ ಹಾಗೂ 25 ಪೂಜ್ಯರ ಮಹಾಮಂಟಪ ಪಾದಪೂಜೆ ವಿಧಿವಿಧಾನಗಳೊಂದಿಗೆ ನೆರವೇರಿತು. ಮಠದ ಪರಂಪರೆಯನ್ನು ಪ್ರತಿಬಿಂಬಿಸುವಂತೆ ವೇದಮಂತ್ರೋಚ್ಚಾರ, ಪೂಜಾ ವಿಧಿಗಳು, ಧಾರ್ಮಿಕ ಆಚರಣೆಗಳು ಭಕ್ತರಲ್ಲಿ ಆಧ್ಯಾತ್ಮಿಕ ತೇಜಸ್ಸು ಮೂಡಿಸಿತು.



ಇದೇ ವೇದಿಕೆಯಲ್ಲಿ ''ಶರಣರ ಜೀವನ ದರ್ಶನ'' ವಿಷಯದ ಪ್ರವಚನ ಕಾರ್ಯಕ್ರಮ ನಡೆಯಿತು. ಶರಣರ ಸರಳತೆ, ಸತ್ಯನಿಷ್ಠೆ, ಸಮಾಜಪರ ಕಾಳಜಿ ಹಾಗೂ ಧಾರ್ಮಿಕ ಮೌಲ್ಯಗಳನ್ನು ಆಧರಿಸಿದ ಸಂದೇಶಗಳು ಭಕ್ತರಲ್ಲಿ ನೈತಿಕ ಜಾಗೃತಿ ಮೂಡಿಸಿತು. ಧರ್ಮ ಮತ್ತು ಸಾಹಿತ್ಯ ಪರಸ್ಪರ ಪೂರಕ ಎಂಬ ಸಂದೇಶ ಕಾರ್ಯಕ್ರಮದ ಪ್ರಧಾನ ಅಂಶವಾಗಿ ಮೂಡಿಬಂದಿತು. ಈ ಪವಿತ್ರ ಸಂದರ್ಭದಲ್ಲಿ ಸುರಪುರದ ಖ್ಯಾತ ಯುವ ಸಾಹಿತಿಗಳಾದ ಶ್ರೀ ಜಾವೀದ ಹುಸೇನ ಹವಲ್ದಾರ ಅವರಿಗೆ ವಿಶೇಷ ಗೌರವ ಸನ್ಮಾನ ಸಲ್ಲಿಸಲಾಯಿತು. ಸಾಹಿತ್ಯ ಕ್ಷೇತ್ರದಲ್ಲಿ ಅವರು ಸಾಧಿಸಿರುವ ವಿಶಿಷ್ಟ ಸಾಧನೆಗಳನ್ನು ಪರಿಗಣಿಸಿ ಪೂಜ್ಯ ಶ್ರೀ ಮ.ನಿ.ಪ್ರ. ಪ್ರಭುಲಿಂಗ ಮಹಾಸ್ವಾಮಿಗಳು ಅವರಿಗೆ ಶ್ರೀರಕ್ಷೆ ಪ್ರದಾನ ಮಾಡಿ ಆಶೀರ್ವದಿಸಿದರು. ವೇದಿಕೆಯ ಮೇಲೆ ಆಸೀನರಾಗಿದ್ದ ಪೂಜ್ಯ ಮಹಾಸ್ವಾಮಿಗಳು, ಗಣ್ಯ ಮಾನ್ಯರು ಅಭಿನಂದನಾ ಮಾತುಗಳ ಮೂಲಕ ಶುಭಾಶಯ ಕೋರಿದರು.

ಶ್ರೀ ಜಾವೀದ ಹುಸೇನ ಹವಲ್ದಾರ ಅವರು 2025ರ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕತರಾಗಿದ್ದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕನ್ನಡ ಜಾಗೃತಿ ಸಮಿತಿಯ ರಾಜ್ಯ ಸದಸ್ಯರಾಗಿ ಕನ್ನಡ ಪರ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ. ವಿಜಯಪುರದ ರಾಜ್ಯ ಮಟ್ಟದ ಅಪ್ಪ ಸಾಹಿತ್ಯ ಪ್ರಶಸ್ತಿ, ಬೀದರ ಜಿಲ್ಲೆಯ ರಾಜ್ಯ ಮಟ್ಟದ ಕನ್ನಡ ಸೇವಾ ರತ್ನ ಪ್ರಶಸ್ತಿ, ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಆಜೂರ ಪ್ರತಿಷ್ಠಾನದಿಂದ 2025ನೇ ಸಾಲಿನ ''ತಂದೆ ತಾಯಿಯರ ಋಣ'' ಎಂಬ ಇವರು ರಚಿಸಿರುವ ಕೃತಿಗೆ ರಾಜ್ಯ ಮಟ್ಟದ ಪುಸ್ತಕ ಪ್ರಶಸ್ತಿ ಸೇರಿದಂತೆ ಅನೇಕ ಗಣ್ಯ ಸಮ್ಮಾನಗಳನ್ನು ಪಡೆದಿರುವುದು ಅವರ ಸಾಹಿತ್ಯ ಸೇವೆಯ ಗಂಭೀರತೆಯನ್ನು ಪ್ರತಿಬಿಂಬಿಸುತ್ತದೆ. ಇದರ ಜೊತೆಗೆ ಸುರಪುರ ಸಂಸ್ಥಾನದ ಅಭಿಮಾನಿಯಾಗಿ ಅರಮನೆಗೆ ವೀಕ್ಷಣೆ ಮಾಡಲು ಬಂದ ಪ್ರೇಕ್ಷಣಾರ್ಥಿಗಳಿಗೆ ಸಮಗ್ರವಾಗಿ ಸುರಪುರ ಇತಿಹಾಸ ಪರಿಚಿಸುವ ಕಾರ್ಯ ನಿರಂತರವಾಗಿರುವುದಕ್ಕೆ ಶ್ಲಾಘನೀಯವಾಗಿದೆ. ಜೊತೆಗೆ ಇತಿಹಾಸ ಸಮಾಜಮುಖಿ ಚಿಂತನೆ, ಮಹತ್ವ, ಮಾನವೀಯ ಮೌಲ್ಯಗಳ ಪ್ರತಿಪಾದನೆ ಹಾಗೂ ಕನ್ನಡಾಭಿವೃದ್ಧಿ ಕಾಳಜಿಯು ಅವರ ಬರಹಗಳಲ್ಲಿ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ ಎಂದು ವಕ್ತಾರರು ಅಭಿಪ್ರಾಯಪಟ್ಟರು.

ಒಂದನೇಯ ಪುಟದಿಂದ

ಹೋಳಿ ಹಬ್ಬದ ಪ್ರಯುಕ್ತ ಶಾಂತಿ ಸಭೆ

ಶಾಂತಿ ಸೌಹಾರ್ಧತೆಯಿಂದ ಹಬ್ಬಗಳನ್ನು ಆಚರಿಸಿ : ಕುಮಾರಸ್ವಾಮಿ

ಅಧಿಕಾರಿಗಳು ಇಂದು ಈ ಜಿಲ್ಲೆಯಲ್ಲಿದ್ದೇವೆ ಮುಂದೆ ಸರಕಾರದ ಆದೇಶ ಬಂದಾಗ ಮತ್ತೊಂದು ಜಿಲ್ಲೆಗೆ ಹೋಗಲೇಬೇಕು ಆದರೆ ತಾವುಗಳು ನಿತ್ಯವೂ ಒಬ್ಬರ ಮುಖ ಒಬ್ಬರು ನೋಡುತ್ತಾ ಇಲ್ಲೇ ಶಾಶ್ವತವಾಗಿ ಇರುವವರು ಅದಕ್ಕಾಗಿ ಜೀವನವನ್ನು ಅರ್ತೈಸಿಕೊಂಡು ಹಬ್ಬಗಳನ್ನು ಆಚರಿಸಬೇಕು, ಮಾರ್ಕೆಟನಿಂದ ಯಾವುದೋ ಒಂದು ತರಕಾರಿ ಅಥವಾ ಮನೆ ಬಳಕೆಯ ವಸ್ತುವನ್ನು ತಂದಿರ್ತೀರಾ ಅದನ್ನು ಯಾರು ಬೆದರು ಯಾರು ತಯಾರಿಸಿದರು ಎಂಬುದನ್ನು ಲೆಕ್ಕಿಸದೇ ನಮ್ಮ ಹೊಟ್ಟೆಗೆ ಸ್ವೀಕರಿಸುತ್ತಿವಲ್ಲ ಅದರಂತೆ ಹಬ್ಬಗಳೂ ಸಹಿತ ಅದವುದೇ ಧರ್ಮ ಸಮುದಾಯವೇ ಇರಲಿ ಸೌಹಾರ್ಧತೆಯಿಂದ ಆಚರಿಸಬೇಕು ಎಂದು ಹೇಳಿದರು.

ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿ ಹಾಗೆ ಹಿರಿಯರಾದವರು ತಮ್ಮ ಯುವಕರಿಗೆ ಸಮಜಾಯಿಸಿ ಹೇಳಿ ಯಾವುದೇ ಅಹಿತಕರ ಗಲಾಟೆಗೆ ಆಸ್ಪದ ನೀಡದೆ ಶಾಂತಿ ಸಂಭ್ರಮದಿಂದ ಹೋಳಿ ಹಬ್ಬವನ್ನು ಆಚರಿಸಿ ಎಂದು ಹೇಳಿಇದ್ದರು.

ಅಧಿಕಾರಿಗಳಾದ ಜಿ. ರವಿಚಂದ್ರ ಕೆ.ಇ.ಬಿ., ರಾಜು ಹೊಸಪೇಟೆ ನಗರಸಭೆ ವ್ಯವಸ್ಥಾಪಕರು ವೇದಿಕೆಯ ಮೇಲೆ ಇದ್ದರು.

ಈ ಸಂದರ್ಭದಲ್ಲಿ ಶ್ರೀನಿವಾಸ ಪತಂಗೆ, ಶರಣ ಬಸವ, ಅಂಬಾಜಿ ಮೈದರರ್ಕ, ಕುಮಾರ, ಅಶೋಕ, ಮಹಾವೀರ, ಪ್ರಭು, ರಸೂಲ ಸಾಬ್ ಹಾಗೂ ಇನ್ನಿತರ ಹಿರಿಯರು ಯುವಕರು ಉಪಸ್ಥಿತರಿದ್ದರು.

ದುಬೈನಲ್ಲಿ ಸಿಲುಕಿದ ಸಿಂಧನೂರಿನ ವೈದ್ಯ ಡಾ.ಕೆ.ಶಿವರಾಜ್

ಹಿಂದೆ ದುಬೈ ಪ್ರವಾಸಕ್ಕೆ ತೆರಳಿದ್ದರು.

ಮಾರ್ಚ್ 1 ರ ಬೆಳಗ್ಗೆ 11 ಗಂಟೆಗೆ ಭಾರತಕ್ಕೆ ವಾಪಾಸ್ಸು ಆಗಮಿಸಲು ಟಿಕೆಟ್ ಬುಕ್ ಮಾಡಲಾಗಿತ್ತು. ಆದರೆ ಇರಾನ್- ಇಸ್ರೇಲ್ ನಡುವಿನ ಯುದ್ಧ ಹಿನ್ನೆಲೆ ವಿಮಾನ ಸೇವೆಗಳು ರದ್ದಾದ ಕಾರಣ ಡಾ.ಕೆ.ಶಿವರಾಜ್ ಸೇರಿದಂತೆ 70 ಜನ ಭಾರತಕ್ಕೆ ಬರಲು ಆಗದೆ ಸಿಲುಕಿಕೊಂಡಿದ್ದಾರೆ.

ವಿಜಯರತ್ನ ಪ್ರಶಸ್ತಿ ಸ್ವೀಕಾರ ಮಾಡಲು ದುಬೈಗೆ ಕರ್ನಾಟಕದಿಂದ 70 ಜನ ಆಗಮಿಸಿದ್ದೇವೆ. ಯುದ್ಧದ ಹಿನ್ನಲೆ ಭಾರತಕ್ಕೆ ಬರುವ ಎಲ್ಲಾ ವಿಮಾನ ಸೇವೆಯನ್ನು ರದ್ದುಗೊಳಿಸಿದ್ದು, ನಾವು ದುಬೈ ಹೋಟೆಲೊಂದರಲ್ಲಿ ತಂಗಿದ್ದೇವೆ. ಇನ್ನೆರೆಡು ದಿನಗಳಲ್ಲಿ ವಿಮಾನ ಸೇವೆ ಆರಂಭವಾಗುವ ನಿರೀಕ್ಷೆಯಲ್ಲಿದ್ದೇವೆ. ನನ್ನನ್ನು ಸೇರಿ ಎಲ್ಲರೂ ಸುರಕ್ಷಿತವಾಗಿದ್ದು, ಯಾರು ಆತಂಕ ಪಡುವ ಅಗತ್ಯವಿಲ್ಲ.

ಸಿರವಾರ ಪಟ್ಟಣ ಪಂಚಾಯತಿಯಲ್ಲಿ ಶ್ರೀ ರೇಣುಕಾಚಾರ್ಯ ಜಯಂತಿ: ಸಮಾಜಕ್ಕೆ ಮಾದರಿ ಗುರುಗಳ ತತ್ವ - ಕೃಷ್ಣನಾಯಕ್

ಬೆಳೆಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದು ಅವರು ಕರೆ ನೀಡಿದರು.

ಉಪಸ್ಥಿತಿ:ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿಗಳು, ವಿವಿಧ ವಾರ್ಡ್‌ಗಳ ಸದಸ್ಯರು, ಕಚೇರಿಯ ಸಿಬ್ಬಂದಿ ವರ್ಗದವರು ಹಾಗೂ ಪಟ್ಟಣದ ಪ್ರಮುಖರು ಉಪಸ್ಥಿತರಿದ್ದು, ಜಗದ್ಗುರುಗಳಿಗೆ ಭಕ್ತಿಪೂರ್ವಕ ನಮನ ಸಲ್ಲಿಸಿದರು.

ತಿಪ್ಪರಾಜು ಹವಾಲ್ದಾರ್ ಅದ್ದೂರಿ ಹುಟ್ಟುಹಬ್ಬ ಆಚರಣೆ

ಜನಸಾಮಾನ್ಯರ ಸೇವೆಯಲ್ಲಿ ನಿತ್ಯ ತೊಡಗಿಸಿಕೊಂಡಿರುವ ಅವರು ಕ್ಷೇತ್ರದ ಅಭಿವೃದ್ಧಿಗೆ ಬಗ್ಗೆ ನಿರಂತರವಾಗಿ ಶ್ರಮಿಸಲು ಚಿಂತನೆ ಮಾಡುತ್ತಿದ್ದಾರೆ.

ಜನಸಾಮಾನ್ಯರ ಮನದಲ್ಲಿ ನೆಲೆಸಿದ್ದಾರೆ. ಶಾಸಕರ ಹುಟ್ಟು ಹಬ್ಬಕ್ಕೆ ಆಡಂಬರ ತೋರದೆ ಸಮಾಜಮುಖಿ ಕೆಲಸಗಳನ್ನು ಮಾಡಲಾಗಿತ್ತು.ತಿಪ್ಪರಾಜು ಹವಾಲ್ದಾರ್

ವ್ಯಕ್ತಿಯಲ್ಲ ಅವರು ನಮೆಲ್ಲರಿಗೂ ಶಕ್ತಿಯಾಗಿದ್ದಾರೆ ರಾಜಕೀಯ ಕ್ಷೇತ್ರದಲ್ಲಿ ಅವರ ನಡೆನುಡಿ ಅಷ್ಟೇ ಅಲ್ಲ ಅವರ ಜನಪರ ಚಿಂತನೆ ನಮೆಲ್ಲರಿಗೂ ಆದರ್ಶವಾಗಿದೆ ಎಂದು ಕಾರ್ಯಕರ್ತರ ಮನದ ಮಾತಾಗಿತ್ತು. ತಿಪ್ಪರಾಜು ಹವಾಲ್ದಾರ್ ಅವರ ಹುಟ್ಟುಹಬ್ಬದ ಅತ್ಯಂತ ಅರ್ಥಪೂರ್ಣವಾಗಿ ಆಚರಣೆ ಮಾಡಲಾಯಿತು.

ಉಪ್ಪಾರ ಸಮಾಜ ವತಿಯಿಂದ ಮಹಾಮಾತೆ ಬಂಗಾರಮ್ಮ ಮಾತಾಜೀ ಅವರಿಗೆ ಶ್ರದ್ಧಾಂಜಲಿ

ಪೂರು, ದೇವೇಂದ್ರಪ್ಪ ಉಪ್ಪಾರ, ಎಂ.ಚಂದ್ರಮೌಳಿ ; ಆರ್.ಪ್ರವೀಣ ಕುಮಾರ, ಎಂ.ಚಂದ್ರಶೇಖರ, ಬಿ.ವೆಂಕೋಬ, ಯು.ಶ್ರೀನಿವಾಸ, ಡಿ.ಶರಣಪ್ಪ, ಎಸ್.ನಾರಾಯಣಪ್ಪ, ಅನಂತಯ್ಯ, ಎಂ.ಈರಣ್ಣ, ಕೆ.ಆಂಜ ನೇಯ್ಯ, ಅಮರೇಶ ಸಾಗರ ಕೆ.ಚಿದಾನಂದ, ಕೆ.ಶರಣಬಸವ, ಯು.ನವೀನಕುಮಾರ, ಎಸ್.ರಂಗನಾಥ, ಹೆಚ್.ಶ್ರೀನಿವಾಸ, ಎ.ಸತ್ಯನಾರಾಯಣ, ಆರ್.ಸುರೇಶ, ಎಸ್.ವೆಂಕಟೇಶ, ಎಸ್.ಶ್ರೀನಿವಾಸ, ವೆಂಕೋಬ ಬುಳ್ಳಾಪೂರ, ಕಾಂತಾಚಾರ್ಯ, ಡಿ.ರಾಮಪ್ಪ, ಎ.ರವಿಕುಮಾರ ಬಿ.ವೆಂಕೋಬ, ಡಿ.ಶರಣಪ್ಪ, ಸಿ.ನಾಗರಾಜ ಸೇರಿದಂತೆ ಸಂಘದ ಪದಾಧಿಕಾರಿಗಳು, ಸಮಾಜದ ಮುಖಂಡರು ಪಾಲ್ಗೊಂಡಿದ್ದರು.

ಜನರ ಜೇಬಿನಿಂದ ಹಣ ಲೂಟಿ: ಕಾಂಗ್ರೆಸ್ ವಿರುದ್ಧ ಎಚ್‌ಡಿಕೆ ವಾಗ್ದಾಳಿ

ವಿಜಯಪುರ:ಮೊದಲೇ ಸಾಲದ ಹೊರೆಯನ್ನು ಹೊರೆಸಿರುವ ಸರ್ಕಾರ ಈಗ ಒಂದು ಲಕ್ಷ ಕೋಟಿ ರೂ.ಗೂ ಅಧಿಕ ಮೊತ್ತದ ಸಾಲವನ್ನು ಮಾಡಲು ರಾಜ್ಯ ಸರ್ಕಾರ ಹೊರಟಿದೆ. ಈ ಹಣವನ್ನು ಜನಸಾಮಾನ್ಯರೇ ತೀರಿಸಬೇಕು. ಆ ಮೂಲಕ ರಾಜ್ಯ ಸರ್ಕಾರ ಜನರ ಜೇಬಿನಿಂದ ಹಣವನ್ನು ದರೋಡೆ ಮಾಡುವಲ್ಲಿ ನಿರತವಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ವಿಜಯಪುರದ ಸಿಂದಗಿ ಬೈಪಾಸ್ ರಸ್ತೆಯ ಬಳಿ ವಿಶಾಲ ಜಾಗೆಯಲ್ಲಿ ಜೆಡಿಎಸ್ ಬೆಳ್ಳಿ ಹಬ್ಬದ ಸಂಭ್ರಮ ಹಾಗೂ ಕಿತ್ತೂರ ಕರ್ನಾಟಕ ಭಾಗದ ಜಿಲ್ಲೆಗಳ ಸಂಘಟನಾ ಸಮಾವೇಶದಲ್ಲಿ ಮಾತನಾಡಿದ ಅವರು, ಲಕ್ಷಾಂತರ ಕೋಟಿ ಸಾಲ ಮಾಡಿರುವ ಸರ್ಕಾರ ಈಗ ಮತ್ತೆ ಸಾಲ ಮಾಡಲು ಹೊರಟಿದೆ, ಅತ್ತ ವಿದ್ಯುತ್ ದರ ಸಹ ಅವ್ಯಾಹತವಾಗಿ ಏರಿಕೆ ಮಾಡಿದೆ. ಯುವಕರ ಕೈಗೆ ಉದ್ಯೋಗವಿಲ್ಲ. ಉದ್ಯೋಗಕ್ಕಾಗಿ ಯುವಜನತೆ ಬೀದಿಗಿಳಿಯುವಂತಾಗಿದೆ. ಈ ಸರ್ಕಾರ ಕೆಟ್ಟ ವ್ಯವಸ್ಥೆಯಿಂದ ಮಾಡುವ ಸಾಲವನ್ನು ಜನಸಾಮಾನ್ಯರೇ ತೀರಿಸಬೇಕು. ಆ ಮೂಲಕ ಜನಸಾಮಾನ್ಯರ ಜೇಬಿನಿಂದ ಹಣ ದರೋಡೆ ಮಾಡಲು ಹೊರಟಿದೆ ಎಂದು ಅಸಮಾಧಾನ ಹೊರಹಾಕಿದರು.



ಇಂದು ಲಕ್ಷಾಂತರ ಸರ್ಕಾರಿ ಹುದ್ದೆಗಳು ಖಾಲಿ ಇವೆ. ಸಾವಿರಾರು ಶಿಕ್ಷಕರ ಹುದ್ದೆ ಖಾಲಿ ಇವೆ. ಕಲ್ಯಾಣ ಕರ್ನಾಟಕ, ಕಿತ್ತೂರ ಕರ್ನಾಟಕ ಎಂಬ ಹೆಸರು ಇರಿಸಿದ ಮಾತ್ರಕ್ಕೆ ಇಲ್ಲಿ ಅಭಿವೃದ್ಧಿ ಪರ್ವ ನಡೆದಿದೆಯೇ? ಎಂದು ಪ್ರಶ್ನಿಸಿದರು.

ಗ್ಯಾರಂಟಿ ಯೋಜನೆಗಳು ಸರ್ಕಾರಕ್ಕೆ ಭಾರವಾಗಿದೆ. ಸ್ಥಿತಿವಂತರು ಗ್ಯಾರಂಟಿ ಬೇಡ ಎಂದು ಬರೆದುಕೊಡು ಎಂದು ಹೇಳಲು ಸರ್ಕಾರ ಈಗ ಮುಂದಾಗಿದೆ. ಎರಡು ಸಾವಿರ ರೂ. ನೀಡಲು ಹಲವಾರು ರೀತಿಯ ತೆರಿಗೆ ಹೊರೆ ಹೊರೆಸಿದ ರಾಜ್ಯ ಕಾಂಗ್ರೆಸ್ ಸರ್ಕಾರ ಬಡವರ ಬದುಕನ್ನು ಬೀದಿಗೆ ತಂದಿದೆ. ಬಡವರ ಬದುಕು ಬೇಡುವ ಬದುಕಾಗಬಾರದು. ದುಡಿಯುವ ಶಕ್ತಿ ಅವರಿಗೆ ಇರಬೇಕು ಎಂದರು.

ರಾಜ್ಯದ ದುಡ್ಡು ಎಲ್ಲಿಗೆ ಹೋಗುತ್ತಿದೆ. ಪ್ರೊ.ಗೋವಿಂದರಾವ್ ವರದಿ ಸಹ ಉ.ಕ. ಜಿಲ್ಲೆಗಳು ತೀರಾ ಹಿಂದುಳಿದಿವೆ ಎಂಬ ವರದಿ ನೀಡಿದೆ. ಹಾಗಾದರೆ ಆಳ್ವಿಕೆ ಮಾಡಿರುವ ಸರ್ಕಾರ ಇಲ್ಲಿಯವರೆಗೆ ಮಾಡಿದ್ದೇನು ಎಂದು ಖಾರವಾಗಿ ಪ್ರಶ್ನಿಸಿದರು.ಸುವರ್ಣ ಸೌಧದ ರೂವಾರಿ ನಾನು. ಆದರೆ ಅಡಿಗಲ್ಲಿನಲ್ಲಿ ನನ್ನ ಹೆಸರು ಇರಿಸದಂತೆ ಷಡ್ಯಂತ್ರ ಮಾಡಿದರು. ಆದರೆ ನನಗೆ ಯಾವ ಅಡಿಗಲ್ಲಿನಲ್ಲಿಯೂ ಹೆಸರು ಬೇಕಾಗಿಲ್ಲ. ನಿಮ್ಮ ಹೃದಯದಲ್ಲಿ ಹೆಸರು ಬೇಕಿದೆ ಎಂದರು.

ನಾನು ಎರಡು ಬಾರಿ ಮುಖ್ಯಮಂತ್ರಿಯಾಗಿರುವೆ. ನನ್ನ ಅವಧಿಯಲ್ಲಿ ಯಾವೊಬ್ಬ ಗುತ್ತಿಗೆದಾರರು ಕುಮಾರಸ್ವಾಮಿ ಅವರಿಗೆ ಕಮೀಷನ್ ಕೊಟ್ಟಿದ್ದೇವೆ ಎಂದು ಹೇಳುವುದಿಲ್ಲ, ಪಾರದರ್ಶಕವಾಗಿ ಗುತ್ತಿಗೆದಾರರಿಗೆ ಬಿಲ್ ನೀಡುವ ವ್ಯವಸ್ಥೆ ನನ್ನ ಅವಧಿಯಲ್ಲಿತ್ತು. ಈಗ ಕಮೀಷನ್ ದಂಧೆಯಿಂದಾಗಿ ರಾಜ್ಯದ ಜನತೆಯನ್ನು ಕಾಂಗ್ರೆಸ್ ಸರ್ಕಾರ ಲೂಟಿ ಮಾಡುತ್ತಿದೆ ಎಂದರು.

ಜಾತಿ ಹೆಸರಿನಲ್ಲಿ ಮತ ಬೇಡ. ಪ್ರಾಮಾಣಿಕರಿಗೆ ಮತ ಕೊಡಿ. ಇಲ್ಲವೇ ಕರ್ನಾಟಕವನ್ನು ಈ ಕಾಂಗ್ರೆಸ್ ಸಂಪೂರ್ಣ ನಾಶ ಮಾಡುವ ದಿನ ದೂರವಿಲ್ಲ. ಹೀಗಾಗಿ ಜಾತಿ ನೋಡಿ ಮತ ಕೊಡಬೇಡಿ. ಪ್ರಾಮಾಣಿಕ ಸೇವಕರಿಗೆ ಮತ ಕೊಡಿ ಎಂದರು. ನವರು ಮುದು ಸಂಪದ್ಭರಿತವಾದ ರಾಜ್ಯ. ಸಕಲ ಅಭಿವೃದ್ಧಿಯನ್ನು ಮಾಡುವ ಶಕ್ತಿ ರಾಜ್ಯಕ್ಕೆ ಇದೆ. ಆದರೆ ಲೂಟಿ ಹೊಡೆಯುವ ಕಾಂಗ್ರೆಸ್ ಸರ್ಕಾರದಿಂದ ರಾಜ್ಯ ಅಧೋಗತಿಗೆ ತಲುಪಿದೆ ಎಂದು ವಿಷಾದಿಸಿದರು.

ಬಿಜೆಪಿ-ಜೆಡಿಎಸ್ ಮೈತ್ರಿ ಸರ್ಕಾರಕ್ಕೆ ಪೂರ್ಣಾವಧಿ ಅವಕಾಶ ಕೊಡಿ

ನನಗೆ ಬೇಕಾಗಿರುವುದು ಕನ್ನಡಿಗರ ಸಮೃದ್ಧ ಬದುಕು. ರೈತರ ಕಲ್ಯಾಣ, ಅಲ್ಪಸಂಖ್ಯಾತ, ಲಿಂಗಾಯತ, ದಲಿತ, ಹಿಂದುಳಿದ ವರ್ಗದ ಸಮುದಾಯ ಎಲ್ಲರೂ ಸೇರಿ ಮುಂದೆ ಬಿಜೆಪಿ-ಜೆಡಿಎಸ್ ಮೈತ್ರಿ ಸರ್ಕಾರಕ್ಕೆ ಪೂರ್ಣಾವಧಿ ಅಧಿಕಾರ ಮಾಡುವ ನಿಟ್ಟಿನಲ್ಲಿ ಬಹುಮತದ ಆಶೀರ್ವಾದ ನೀಡಿ ಎಂದು ಕೋರಿಕೊಳ್ಳಲು ಇಲ್ಲಿಗೆ ಬಂದಿರುವೆ ಎಂದು ಕುಮಾರಸ್ವಾಮಿ ಹೇಳಿದರು.

ಖರ್ಗೆ ಅವರು ಏಕೆ ಅಭಿವೃದ್ಧಿ ಮಾಡಲಿಲ್ಲ?

ಯಾದಗಿರಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮೈಸೂರು, ಕನಕಪುರದಂತೆ ಈ ಭಾಗವನ್ನು ಅಭಿವೃದ್ಧಿಪಡಿಸಿ ಎಂದು ಹೇಳಿದ್ದಾರೆ. ಆದರೆ ಖರ್ಗೆ ಅವರು ಈಗ ಅವರ ಮಗ ಅಧಿಕಾರದಲ್ಲಿಯೇ ಇದ್ದಾರೆ. ಉತ್ತರ ಕರ್ನಾಟಕದ ಪ್ರಗತಿಗೆ ಏಕೆ ಆದ್ಯತೆ ನೀಡಲಿಲ್ಲ. ಈ ರೀತಿಯ ಹೇಳಿಕೆ ಮೂಲಕ ಉತ್ತರ ಕರ್ನಾಟಕ ದಕ್ಷಿಣ ಕರ್ನಾಟಕ ಎಂಬ ಬೇಧ ಸೃಜಿಸಬೇಡಿ. ಬೇರೆ ರಾಜ್ಯದ ಕೂಗು ಮೊಳಗಿಸುತ್ತಿರುವವರು ಕರ್ನಾಟಕದ ಶತ್ರುಗಳು ಎಂದು ಗುಡುಗಿದರು.

ರಾಜ್ಯದಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆ ತಡೆಗಟ್ಟಿ : ಶೀಘ್ರವೇ ಖಾಯಂ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಆಗ್ರಹ

ವಿಜಯಪುರ: ಕರ್ನಾಟಕದ ಎಲ್ಲಾ ವರ್ಗದ ಲಕ್ಷಾಂತರ ಉದ್ಯೋಗಾಕಾಂಕ್ಷಿಗಳು ಇಂದು ಅತ್ಯಂತ ಸಂಕಷ್ಟದ ಪರಿಸ್ಥಿತಿಯಲ್ಲಿದ್ದು, ಶೀಘ್ರವೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ನಾಡಿನ ಯುವಜನರಿಗೆ ಖಾಯಂ ಉದ್ಯೋಗ ನೀಡಬೇಕೆಂದು ಆಗ್ರಹಿಸಿ ದಲಿತ ವಿದ್ಯಾರ್ಥಿ ಪರಿಷತ್ ವತಿಯಿಂದ ವಿಜಯಪುರ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಕುರಿತು ಮಾತನಾಡಿದ ದಲಿತ ವಿದ್ಯಾರ್ಥಿ ಪರಿಷತ್ ರಾಜ್ಯ ಸಂಚಾಲಕ ಬಾಲಾಜಿ ಕಾಂಬಳೆ, ಈಗಾಗಲೇ ದಲಿತ ವಿದ್ಯಾರ್ಥಿ ಪರಿಷತ್ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಹಲವು ಹೋರಾಟದ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತಾ ಬಂದಿದ್ದೆ. ರಾಜ್ಯದಲ್ಲಿ ನೇಮಕಾತಿ ಪ್ರಕ್ರಿಯೆಗಳು ವಿಳಂಬವಾ ಗುತ್ತಿರುವುದರಿದ ಲಕ್ಷಾಂತರ ಯುವಕರು ಮಾನಸಿಕ ಖಿನ್ನತೆಗೆ ಒಳಗಾಗಿದ್ದಾರೆ. ಅತೀ ಹೆಚ್ಚು ವಿದ್ಯಾಭ್ಯಾಸ ಮಾಡಿಯೂ ಉದ್ಯೋಗವಿಲ್ಲದೆ, ಮನೆಯವರ ನಿರೀಕ್ಷೆಗಳನ್ನು ಪೂರೈಸಲಾಗದೆ ರಾಜ್ಯದ ಹಲವು ಭಾಗಗಳಲ್ಲಿ ನಿರುದ್ಯೋಗಿ ಯುವಕರು ಆತ್ಮಹತ್ಯೆಯಂತಹ ಅತೀ ದಾರುಣ ಹಾದಿ ಹಿಡಿಯುತ್ತಿ ರುವುದು ಅತ್ಯಂತ ನೋವಿನ ಸಂಗತಿಯಾಗಿದೆ. ಯುವಶಕ್ತಿಯನ್ನು ಈ ಹತಾಶೆಯಿಂದ ಹೊರತರುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಸರ್ಕಾರವು ಬಹುತೇಕ ಇಲಾಖೆಗಳಲ್ಲಿ ಖಾಯಂ ಹುದ್ದೆಗಳನ್ನು ಭರ್ತಿ ಮಾಡುವ ಬದಲಿಗೆ ಒಳ ಗುತ್ತಿಗೆ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುತ್ತಿದೆ. ಇದರಿಂದ ಯುವಕರಿಗೆ ಉದ್ಯೋಗ ಭದ್ರತೆ ಇಲ್ಲದಂತಾಗಿದೆ ಮತ್ತು ಇದು ಯುವಜನರ ಬದುಕಿನ ಜೊತೆ ಆಟವಾಡಿದಂತಾಗಿದೆ. ದಯವಿಟ್ಟು ಈ ಪದ್ಧತಿಯನ್ನು ಕೈಬಿಟ್ಟು, ಸಂವಿಧಾನಬದ್ಧವಾಗಿ ನೇರ ಮತ್ತು ಖಾಯಂ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು. ಕೋವಿಡ್ ಕಾರಣದಿಂದ ಮತ್ತು ಒಳಮೀಸಲಾತಿ ಜಾರಿಯಿಂದಾಗಿ ಪರೀಕ್ಷೆಗಳು ಸರಿಯಾದ ಸಮಯಕ್ಕೆ ನಡೆಯದ ಕಾರಣ ಲಕ್ಷಾಂತರ ಅಭ್ಯರ್ಥಿಗಳು ವಯೋಮಿತಿ ಮೀರಿದ್ದಾರೆ. ಇವರಿಗೆ ನ್ಯಾಯ ಒದಗಿಸಲು ಕನಿಷ್ಠ 5 ವರ್ಷಗಳ ವಯೋಮಿತಿ ಸಡಿಲಿಕೆ ಅತೀ ಅಗತ್ಯವಾಗಿದೆ. ಈ ಬಗ್ಗೆ ನಿಮ್ಮ ಸರ್ಕಾರ ವಯೋಮಿತಿ ಸಡಿಲಗೊಳಿಸಿರುವದು ಸಕಾರಾತ್ಮಕ ಸ್ಪಂದನೆ ನೀಡಿದೆ. ಆದರೆ ಬಹು ದಿನಗಳ ದಲಿತ ಸಮುದಾಯದ ಒಳಮೀಸಲಾತಿ ಜಾರಿಗೆ ಸರ್ಕಾರದ ವಿಳಂಬ ನೀತಿ ಅನುಸರಿಸುತ್ತಿರುವದು ನಿರಾಶೆ ಮೂಡಿಸಿದೆ. ಕೂಡಲೇ ಪೂರ್ಣ ಪ್ರಮಾಣದಲ್ಲಿ ಒಳಮೀಸಲಾತಿ ಜಾರಿ ಮಾಡಿ ಅದರಂತೆ ನೇಮಕಾತಿ ಅಧಿಸೂಚನೆ ಹೊರಡಿಸಬೇಕು.

ಉದ್ಯೋಗ ಮೇಳ ಹೆಸರಿನಲ್ಲಿ ಈ ನಾಡಿನ ಯುವ ಶಕ್ತಿಯನ್ನು ಖಾಸಗಿ ಕಂಪನಿಗಳಿಗೆ ನೀಡುವ ಬದಲು ಸರ್ಕಾರದಿಂದ ನೇಮಕಾತಿ ಪ್ರಕ್ರಿಯೆ ನಡೆಯಲಿ. ನಾಡಿನ ಯುವ ಶಕ್ತಿ ಈ ನಾಡನ್ನು ಕಟ್ಟಲು ಸದ್ಬಳಕೆ ಆಗಲಿ ಎಂಬದು ನಮ್ಮೆಲ್ಲರ ಆಶಯವಾಗಿದೆ. ಖಾಲಿ ಇರುವ 2.8 ಲಕ್ಷಕ್ಕೂ ಅಧಿಕ ಹುದ್ದೆಗಳಿಗೆ ಹಂತ-ಹತವಾಗಿ ಶೀಘ್ರವೇ ಅಧಿಸೂಚನೆ ಹೊರಡಿಸಿ, ಅಭ್ಯರ್ಥಿ ಗಳಲ್ಲಿ ಭರವಸೆ ಮೂಡಿಸಬೇಕು ಎಂದರು.



ಬಡ ಮತ್ತು ಮಧ್ಯಮ ವರ್ಗದ ಪ್ರತಿಭಾವಂತ ಯುವಕರು ಇನ್ನು ಮುಂದೆ ಸಾವಿಗೆ ಶರಣಾಗದಂತೆ ತಡೆಯಲು ಮತ್ತು ಅವರಿಗೆ ಗೌರವಯುತ ಬದುಕು ನೀಡಲು ಸರ್ಕಾರ ತಕ್ಷಣವೇ ಸ್ಪಂದಿಸಬೇಕು. ಈ ವಿಚಾರದಲ್ಲಿ ತಾವು ವಿಳಂಬ ನೀತಿ ಅನುಸರಿಸಿದರೆ ಮುಂದಿನ ದಿನಗಳಲ್ಲಿ ನಿರುದ್ಯೋಗಿ ಯುವಜನರು ಮತ್ತು ವಿದ್ಯಾರ್ಥಿಗಳಿಗೆ ಸಂಘಟಿಸಿ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಬಾಲಾಜಿ ಕಾಂಬಳೆ ಹೇಳಿದರು.ಈ ವೇಳೆ ದಲಿತ ವಿದ್ಯಾರ್ಥಿ ಪರಿಷತ್ ನ ಜಿಲ್ಲಾ ಸಹ ಸಂಚಾಲಕ ಮಹಾದೇವ ಚಲವಾದಿ, ದಾವೂದ್ ನಾಯ್ಕೋಡಿ, ಹುಚ್ಚಪ್ಪ ಭಾವಿಮನಿ, ಸಿದ್ದು ಸಿಂಗೆ, ಮಹೇಶ ಕೊಳ್ಳಿ, ವಿನೋದ್, ಸಂದೇಶ, ಮಂಜು ಬಿಸನಾಳ, ವಿರೇಶ, ದಾನೇಶ್, ಮಂಜುನಾಥ್, ಪ್ರಕಾಶ ಮತ್ತಿತರರು ಇದ್ದರು.

ಮಕ್ಕಳಲ್ಲಿ ವ್ಯವಹಾರಿಕ ಜ್ಞಾನ ಬೆಳೆಸಲು ಸಂತೆ ಮೇಳ ಕಾರ್ಯಕ್ರಮ ಅತ್ಯಂತ ಸಹಕಾರಿಯಾಗಿದೆ : ಕಂದಾರಿ



ಕೊಪ್ಪಳ/ಇಂದಿನ ಮಕ್ಕಳೇ ಈ ನಾಡಿನ ಭಾವಿ ಪ್ರಜೆಗಳು ಅವರ ಭವಿಷ್ಯ ಉಜ್ವಲಗೊಳ್ಳಲು ಅವರಿಗೆ ಉತ್ತಮ ಗುಣಮಟ್ಟದ ಶಿಕ್ಷಣದ ಜೊತೆಗೆ ಸಾಮಾಜಿಕ ಜ್ಞಾನ ವ್ಯವಹಾರಿಕ ಜ್ಞಾನ ಅತ್ಯವಶ್ಯಕವಾಗಿದೆ ಈ ದಿಶೆಯಲ್ಲಿ ಶಾಲೆಯಲ್ಲಿ ಏರ್ಪಡಿಸಿರುವ ಸಂತೆ ಮೇಳ ಕಾರ್ಯಕ್ರಮ ಅತ್ಯಂತ ಸಹಕಾರಿ ಯಾಗಿದೆ ಎಂದು ಸೇವಾ ಭಾರತಿ ವಿದ್ಯಾ ವಿಕಾಸ ಪ್ರಕಲ್ಪ ಸದಸ್ಯರಾದ ಮಹಾಲಕ್ಷ್ಮಿ ಕಂದಾರಿ ಹೇಳಿದರು,

ಅವರು ನಗರದ ನಂದೀಶ್ವರ ಶಾಲೆ ಯಲ್ಲಿ ಶನಿವಾರ ಬೆಳಗ್ಗೆ ಶಾಲಾ ಮಕ್ಕಳಿಂದ ಏರ್ಪಡಿಸಿದ್ದ ಸಂತೆ ಮೇಳ ಹಾಗೂ ವಿಜ್ಞಾನ ವಸ್ತು ಪ್ರದರ್ಶನದ ಉದ್ಘಾಟನೆ ನೆರವೇರಿಸಿ ಮಾತನಾಡಿದರು,

ಮುಂದುವರೆದು ಮಾತನಾಡಿ ಮಕ್ಕಳಿಗೆ ಸಾಮಾಜಿಕ ವ್ಯವಹಾರಿಕ ಬೌದ್ಧಿಕ ವಿಚಾರ, ಜ್ಞಾನ ಬೆಳೆಸಬೇಕಾಗಿದೆ ಅವರು ಉತ್ತಮ ಪ್ರಜೆಗಳಾಗಿ ತಮ್ಮ ತಮ್ಮ ಬದುಕು ಕಟ್ಟಿಕೊಳ್ಳಬೇಕಾಗಿದೆ ,ಅದಕ್ಕೆ ಶಿಕ್ಷಕ ರಷ್ಟೇ ಪಾಲಕರ ಜವಾಬ್ದಾರಿ ಕೂಡ ಮಕ್ಕಳ ಮೇಲೆ ಹೆಚ್ಚಾಗಿದೆ, ಮಕ್ಕಳಿಗೆ ಮೊಬೈಲಿಂದ ದೂರ ಉಳಿಸಿ ಅವರಿಗೆ ಇಂತಹ ಉತ್ತಮ ಸಾಮಾಜಿಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅವರಿಗೆ ಇಂತಹ ಕಾರ್ಯಕ್ರಮಗಳು ಪ್ರೇರಣೆಯಾಗಿದೆ ಎಂದು ಸೇವಾ ಭಾರತಿ ವಿದ್ಯಾ ವಿಕಾಸ ಪ್ರಕಲ್ಪ ಸದಸ್ಯರಾದ ಮಹಾಲಕ್ಷ್ಮಿ ಕಂದಾರಿ ಅಭಿಪ್ರಾಯ ಪಟ್ಟರು,

ಸಮಾರಂಭದ ಅಧ್ಯಕ್ಷತೆಯನ್ನು ನಂದೀಶ್ವರ ಶಾಲೆಯ ಮುಖ್ಯೋಪಾಧ್ಯರಾದ ಸುರೇಶ್ ಕುಂಬಾರ್ ವಹಿಸಿ ಮಾತನಾಡಿ ನಮ್ಮ ಶಾಲೆಯಲ್ಲಿ ಇಂತಹ ಕಾರ್ಯಕ್ರಮ ಜರುಗಲು ಶಾಲೆಯ ಶಿಕ್ಷಕರ ಪರಿಶ್ರಮ ಹಾಗೂ ವಿದ್ಯಾರ್ಥಿಗಳ ಪಾಲಕರ ಸಹಕಾರ ದಿಂದ ಇದು ಯಶಸ್ವಿಯಾಗಿದೆ ಎಂದರು,

ಮುಖ್ಯ ಅತಿಥಿಗಳಾಗಿ ಸಾಹಿತಿ ಪತ್ರಕರ್ತ ಜಿ.ಎಸ್. ಗೋನಾಳ ಮಾತನಾಡಿ ಪಾಲಕರು ತಮ್ಮ ಮಕ್ಕಳಿ ಗಾಗಿ ಆಸ್ತಿ ಮಾಡದೆ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ ಎಂದರು, ಸಾಹಿತಿ ಶ್ರೀನಿವಾಸ್ ಬಡಿಗೇರ್ ಅವರು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಕುರಿತು ವಿಶೇಷ ಉಪನ್ಯಾಸ ನೀಡಿದರು, ಹಿರಿಯ ಪತ್ರಕರ್ತ ಎಂ ಸಾಧಿಕ ಅಲಿ, ಖಾಸಗಿ ಶಾಲಾ ಆಡಳಿತ ಮಂಡಳಿ ಒಕ್ಕೂಟದ ಅಧ್ಯಕ್ಷ ಶಾಹಿದ್ ಹುಸೇನ್ ತಹಸೀಲ್ದಾರ್ ಮತ್ತು ಕಲಂ ಪಬ್ಲಿಕ್ ಶಾಲೆಯ ಅಧ್ಯಕ್ಷ ಅಲಿಮುದ್ದೀನ್, ಪತ್ರಕರ್ತರ ಸಂಘದ ಜಿಲ್ಲಾ ಖಜಾಂಚಿ ಫಕೀರಪ್ಪ ಗೋಟೂರ್ ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು, ಸಹ ಶಿಕ್ಷಕಿ ಲಕ್ಷ್ಮಿ ಅವರು ಕಾರ್ಯಕ್ರಮ ನಿರೂಪಿಸಿದರೆ ,ಸಹ ಶಿಕ್ಷಕಿ ಮಹಾದೇವಿ ಯವರು ಆರಂಭದಲ್ಲಿ ಸ್ವಾಗತಿಸಿದರು ಶಾಲಾ ಮಕ್ಕಳಿಂದ ಆರಂಭದಲ್ಲಿ ಪ್ರಾರ್ಥನೆ ಗೀತೆ ಜರುಗಿತು, ಮಕ್ಕಳಿಂದ ಏರ್ಪಡಿಸಿದ ಸಂತೆ ಮೇಳ ವಿಜ್ಞಾನ ವಸ್ತು ಪ್ರದರ್ಶನ ಸಂಸ್ಕೃತಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿ ಜನಮನ ರಂಜಿಸಿತು.

ಆದಿ ಜಗದ್ಗುರು ರೇಣುಕಾಚಾರ್ಯ ಜಯಂತಿ ಆಚರಣೆ

ಸಿರುಗುಪ್ಪಮಾ.01-

ತಾಲೂಕ ಕಚೇರಿಯಲ್ಲಿ ತಾಲೂಕ ಆಡಳಿತದಿಂದ ಶ್ರೀ ಆದಿ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗ ಮಾನೋತ್ಸವ ಆಚರಣೆಯಲ್ಲಿ ತಹಶೀಲ್ದಾರ್ ಗೌಸಿಯ ಬೇಗಂ ಅವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರಕ್ಕೆ ಮಾಲಾರ್ಪಣೆ ಗೌರವದೊಂದಿಗೆ ಪುಷ್ಪ ಅರ್ಪಿಸಿ ಸ್ಮರಿಸಿ ನೆನಪಿಸಲಾಯಿತು

ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಸದಸ್ಯರು ಸಮಾಜ ಸುಧಾರಕ ಅಬ್ದುಲ್ ನಬಿ ಅವರು ಮಾತನಾಡಿ ಏನಾದರೂ ಆಗು ಮೊದಲು ಮಾನವನಾಗು ಮಾನವನಾಗಿ ಹುಟ್ಟಿದ ಮೇಲೆ ಧರ್ಮದ ನೆಲೆಗಟ್ಟಿನ ಮೇಲೆ ನಡೆಯುವುದನ್ನು ಕಲಿತುಕೋ ಧರ್ಮವನ್ನು ರಕ್ಷಿಸಿದರೆ ಧರ್ಮ ನಮ್ಮೆಲ್ಲರನ್ನು ಸದಾ ರಕ್ಷಿಸುತ್ತದೆ ಇತಿಹಾಸ ಹಾಗೂ ಪರಂಪರೆ ನಮ್ಮೆಲ್ಲರ ಕಣ್ಣ ಮುಂದೆ ನಿತ್ಯ ಸಾಕ್ಷಿಯಾಗಿ ವಿರಾ ಜಮಾನವಾಗಿದೆ ಎಂದರು

ತಾಲೂಕ ಕಚೇರಿಯ ಅಧಿಕಾರಿ ಮಹಾಂತೇಶ ಸಿಬ್ಬಂದಿ ವರ್ಗದವರು ಮತ್ತಿತರರು ಇದ್ದರು

ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಅವಕಾಶ ವಂಚಿತರು: ರವಿ ಕಳವಳ

ವಿಜಯಪುರ:ಮಹಿಳೆಯರು ಇವತ್ತಿಗೂ ಎಲ್ಲಾ ಕ್ಷೇತ್ರದಲ್ಲಿಯೂ ಅವಕಾಶ ವಂಚಿತರಾಗಿದ್ದಾರೆ ಎಂದು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಕೆ. ರವಿ ಹೇಳಿದರು.ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿ ದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮ ದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.ಮಹಿಳೆಯರ ಪ್ರಶ್ನೆಗಳು, ಅವರ ಹೋರಾಟಗಳು ಮತ್ತು ಸಮಾಜದ ಬದಲಾವಣೆಯ ಅಗತ್ಯವನ್ನು ಸ್ಪಷ್ಟವಾಗಿ ಹೇಳಿರುವ ಅನುಪಮಾ ನಿರಂಜನ ಅವರ ಲೇಖನಗಳು ಮಹಿಳಾ ಜಾಗೃತಿಗೆ ಮಹತ್ವದ ಪ್ರೇರಣೆಯಾಗಿವೆ. ಮಹಿಳೆಯರು ವರದಿಗಾರಿಕೆಗೆ ಮಾತ್ರ ಸೀಮಿತವಾಗದೆ ಸಾಹಿತ್ಯ-ಸಾಂಸ್ಕತಿಕ ಕ್ಷೇತ್ರದಲ್ಲಿಯೂ ತಮ್ಮ ಸ್ಥಾನವನ್ನು ಬಲಪಡಿಸಬೇಕು ಅಷ್ಟೇ ಅಲ್ಲದೇ ಅವಕಾಶವಂಚಿತ ಮಹಿಳೆಯರ ಸ್ಥಿತಿ ಇನ್ನೂ ಮುಂದುವರಿದಿರುವುದು ವಿಷಾದನೀಯವಾಗಿದ್ದು, ಮಹಿಳಾ ಸಬಲೀಕರಣಕ್ಕೆ ಪತ್ರಿಕೋದ್ಯಮ ವಿಭಾಗಗಳು ಬಲವಾದ ವೇದಿಕೆಯಾಗಬೇಕು. ಮಾಧ್ಯಮದಲ್ಲಿ ಪರಿಣತಿ ಹೊಂದಿದವರು ಉತ್ತಮ ಪತ್ರಿಕೋದ್ಯಮ ಶಿಕ್ಷಕರಾಗಬಹುದು ಎಂದರು.



ಕರ್ನಾಟಕ ಮಹಿಳಾ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗ ನೀಡುತ್ತಿರುವ ಗುಣಮಟ್ಟದ ಶಿಕ್ಷಣ, ಸಮೃದ್ಧ ಮತ್ತು ಸುಸಜ್ಜಿತ ಸ್ಟುಡಿಯೋ ವಾತಾವರಣ ಮತ್ತು ವಿದ್ಯಾರ್ಥಿ-ಕೇಂದ್ರೀಕೃತ ಕೆಲಸಗಳು ಪ್ರಶಂಸನೀಯವೆಂದರು. ಗುರಿ ಸ್ಪಷ್ಟವಾಗಿದ್ದರೆ ಸಾಧನೆ ಸುಲಭವಾಗುತ್ತದೆ ಎಂದು ವಿದ್ಯಾರ್ಥಿನಿಯರಿಗೆ ಸಲಹೆ ನೀಡಿದರು.ಮಾಧ್ಯಮ ವಿಭಾಗಗಳ ಹೋಲಿಕೆ ಮಾಡಿದಾಗ ವಿಜಯಪುರ ಮಹಿಳಾ ವಿಶ್ವವಿದ್ಯಾಲಯದ ಮಾಧ್ಯ ಮ ವಿಭಾಗ ಉನ್ನತ ಸ್ಥಾನದಲ್ಲಿದೆ. ಗ್ರಾಮೀಣ ಮತ್ತು ಕನ್ನಡ ಮಧ್ಯಮ ದ ಮಹಿಳೆಯರಿಗೆ ಬೆಳೆಯಲು ಹೆಚ್ಚಿನ ಅವಕಾಶಗಳು ದೊರೆ ಯಬೇಕು. ದೇಶವ್ಯಾಪಿ ಯಾಗಿ ಬೆಳೆಯುತ್ತಿರುವ ಪತ್ರಿಕೋದ್ಯಮ ಕ್ಷೇತ್ರ ಅಂತರರಾಷ್ಟ್ರೀಯ ಮಟ್ಟದ ಲ್ಲೂ ಪ್ರಭಾವ ಬೀಳಲಿ ಎನ್ನುವುದು ಎಲ್ಲರ ಆಶಯ. ಮನೆಯ ಜವಾಬ್ದಾರಿಗಳ ನಡುವೆ ಶಿಕ್ಷಣ ಮುಂದು ವರಿಸುವುದು ಗ್ರಾಮೀಣ ಮಹಿಳೆ ಯರಿಗೆ ಸವಾಲಾಗಿದ್ದು, ಅವರಿಗೆ ಹೆಚ್ಚಿನ ಸೌಲಭ್ಯ ಮತ್ತು ಬೆಂಬಲ ಅಗತ್ಯವಿದೆ ಎಂದು ಹೇಳಿದರು.ಇದೇ ಸಂದರ್ಭದಲ್ಲಿ ವಿಭಾಗದ ಮುಖ್ಯಸ್ಥ ಪ್ರೊ. ಓಂಕಾರ ಕಾಕಡೆ ಮಾತನಾಡಿ, ಬಿಕೆ ರವಿ ಸರ್ ಅವರ ಕಾರ್ಯಕ್ಷೇತ್ರದ ನಿಷ್ಠೆ ಮತ್ತು ಸಮಾಜಮುಖಿ ಸಂಶೋಧನೆಗಳು ವಿದ್ಯಾರ್ಥಿಗಳಿಗೆ ಸಾಕಷ್ಟು ಪ್ರೇರಣೆ ಯಾಗಿವೆ. ಮಾಧ್ಯಮ ನೈತಿಕತೆ, ಜವಾಬ್ದಾರಿ ಮತ್ತು ವೃತ್ತಿಪರ ಮೌಲ್ಯಗಳನ್ನು ಅವರು ಸ್ಪಷ್ಟವಾಗಿ ಹೆಸರು ಪಡಿಸಿದ್ದಾರೆ. ಅಷ್ಟೇ ಅಲ್ಲದೇ ಅವರ ಮಾರ್ಗದರ್ಶನದಲ್ಲಿ ಅನೇಕ ವಿದ್ಯಾರ್ಥಿಗಳು ಗುಣಮಟ್ಟದ ಪತ್ರಿಕೋದ್ಯಮದತ್ತ ಪ್ರೇರಿತರಾಗಿ ದ್ದಾರೆ. ಪತ್ರಿಕೋದ್ಯಮ ಕ್ಷೇತ್ರದ ಅಭಿವೃದ್ಧಿಗೆ ಅವರ ಕೊಡುಗೆ ಅಪಾರವಾಗಿದೆ ಎಂದರು.ಕಾರ್ಯಕ್ರಮದಲ್ಲಿ ಪತ್ರಿಕೋದ್ಯಮ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ತಹಮೀನಾ ಕೊಲಾರ, ಡಾ. ಸಂದೀಪ್, ಸಂಶೋದನಾ ವಿದ್ಯಾರ್ಥಿನಿ ಯರಾದ ಪವಿತ್ರಾ, ಕಂಬಾರ, ಜಯಶ್ರೀ ತಳವಾರ ಮತ್ತು ವಿವಿಧ ವಿಭಾಗಗಳ ವಿದ್ಯಾರ್ಥಿನಿಯರು, ಪ್ರಾಧ್ಯಾಪಕರು ಹಾಗೂ ಮತ್ತಿತರರು ಇದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಜಗತ್ತು ಬಯಸುತ್ತಿರುವುದು ಯುದ್ಧವನ್ನಲ್ಲ; ಶಾಂತಿ-ನೆಮ್ಮದಿಯನ್ನು



ಬಲಿಷ್ಠರ ಯುದ್ಧ ದಾಹದಿಂದ ಸಂಘರ್ಷಗಳು ನಿಲ್ಲುತ್ತಿಲ್ಲ. ನಿಂತರೂ ಅದು ಶಾಶ್ವತವಲ್ಲ. ಪ್ರಸ್ತುತ ಸಂದರ್ಭದಲ್ಲಿ ಶಾಂತಿಯ ದಾರಿ ಜಟಿಲವಾಗಿದೆ. ಶಾಂತಿಯನ್ನು ಸಾಕಾರಗೊಳಿಸಲು ಜಗತ್ತಿನ ನಾಗರಿಕರು ಒಗ್ಗಟ್ಟಾಗಿ ನಿಲ್ಲಬೇಕಿದೆ.

ಟ್ರಂಪ್ ಅಧ್ಯಕ್ಷರಾದ ನಂತರ, ಅಮೆರಿಕದ ಧೋರಣೆಗಳು ತ್ವರಿತವಾಗಿ ಬದಲಾಗುತ್ತಿವೆ. ಆರ್ಥಿಕ ನಿರ್ಬಂಧಗಳು, ಯುದ್ಧದ ಬೆದರಿಕೆಗಳು, ಸುಂಕ ಹೇರಿಕೆಗಳು ಹೆಚ್ಚುತ್ತಿವೆ. ಇದೇ ಸಮಯದಲ್ಲಿ, ನಾನಾ ರಾಷ್ಟ್ರಗಳ ನಡುವೆ ಯುದ್ಧದ ಕಾರ್ಮೋಡವೂ ಕವಿದಿದೆ. ಈ ಯುದ್ಧಗಳ ಹಿಂದೆ ಅಮೆರಿಕದ ಕುಮ್ಮಕ್ಕು ಇರುವುದು ಅದೇ ಸ್ಪಷ್ಟವಾಗಿ ಕಾಣುತ್ತಿದೆ.

ಶನಿವಾರ ಬೆಳಗ್ಗೆ, ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಜಂಟಿ ದಾಳಿ ನಡೆಸಿವೆ. ಇರಾನ್ ರಾಜಧಾನಿ ಟೆಹ್ರಾನ್‌ನಲ್ಲಿ ಭಾರೀ ಸದ್ದುಗಳು ಕೇಳಿಬಂದಿವೆ. ಇರಾನ್ ಸರ್ಕಾರ ತನ್ನ ಪ್ರಜೆಗಳಿಗೆ ಸುರಕ್ಷತೆ ಮತ್ತು ಪ್ರತಿದಾಳಿಯ ಸೈರನ್ ಮೊಳಗಿಸಿದೆ. ಪ್ರತಿಯಾಗಿ ಇಸ್ರೇಲ್ ಮೇಲೆ ವಾಯುದಾಳಿ ನಡೆಸಲು ಮುಂದಾಗಿದೆ. ಇರಾನ್ ಮೇಲಿನ ದಾಳಿಗೆ ಇಸ್ರೇಲ್‌ಅನ್ನು ಪ್ರಮುಖ ಕಾರಣವಾಗಿ ನೋಡಲಾಗುತ್ತಿದೆಯಾದರೂ, ದಾಳಿಯ ಹಿಂದಿನ ರೂವಾರಿ ಅಮೆರಿಕ.

ಜಗತ್ತನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಬೇಕು, ವಿಶ್ವದ ದೊಡ್ಡಣ್ಣನಾಗಿ ಎಂದಿಗೂ ತಾನೇ ಇರಬೇಕೆಂದು ಅಮೆರಿಕ, ತೈಲದ ಮೇಲೆ ನಿಯಂತ್ರಣ ಸಾಧಿಸಲು ಹವಣಿಸುತ್ತಿದೆ. ಪ್ರಸ್ತುತ ಸಂದರ್ಭದಲ್ಲಿ ಅತೀ ಹೆಚ್ಚು ತೈಲ ನಿಕ್ಷೇಪಗಳನ್ನು ಹೊಂದಿರುವ ರಾಷ್ಟ್ರಗಳಲ್ಲಿ ವೆನೆಜುವೆಲಾ ಮತ್ತು ಇರಾನ್ ಅಗ್ರ ಸ್ಥಾನದಲ್ಲಿವೆ. ಆದ್ದರಿಂದ, ಈ ಎರಡೂ ರಾಷ್ಟ್ರಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡರೆ, ಜಗತ್ತು ತಾನು ಹೇಳಿದಂತೆ ಕೇಳುತ್ತದೆ ಎಂಬುದು ಟ್ರಂಪ್ ನೇತೃತ್ವದ ಅಮೆರಿಕದ ಭ್ರಮೆ.

ಈಗಾಗಲೇ, ವೆನೆಜುವೆಲಾ ಮೇಲೆ ದಾಳಿ ಮಾಡಿ, ಆ ರಾಷ್ಟ್ರವನ್ನು ಅಮೆರಿಕ ತನ್ನ ಸುಪರ್ದಿಗೆ ತೆಗೆದುಕೊಂಡಿದೆ. ವೆನೆಜುವೆಲಾದಲ್ಲಿನ ತೈಲವನ್ನು ಅಮೆರಿಕ ಮಾರಾಟ ಮಾಡುತ್ತಿದೆ. ಆ ತೈಲವನ್ನೇ ಖರೀದಿಸುವಂತೆ ಭಾರತವೂ ಸೇರಿದಂತೆ ಹಲವು ರಾಷ್ಟ್ರಗಳಿಗೆ ಟ್ರಂಪ್ ತಾಕೀತು ಮಾಡಿದ್ದಾರೆ. ಪ್ರಧಾನಿ ಮೋದಿಯಂತಹವರು ಟ್ರಂಪ್‌ಗೆ ಶರಣಾಗಿ, ತೈಲ ಖರೀದಿಯನ್ನೂ ಮಾಡುತ್ತಿದ್ದಾರೆ.

ಈಗ, ಮಧ್ಯಪ್ರಾಚ್ಯದ ಬೃಹತ್ ರಾಷ್ಟ್ರ ಇರಾನ್‌ಅನ್ನೂ ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಅಮೆರಿಕ ಹವಣಿಸಿದೆ. ಅದಕ್ಕಾಗಿ, ಈ ಹಿಂದೆ, ಅಮೆರಿಕ ಬೆಂಬಲಿತ ಇಸ್ರೇಲ್, 2025ರ ಜೂನ್‌ನಲ್ಲಿ ಇರಾನ್ ಮೇಲೆ ದಾಳಿ ನಡೆಸಿತ್ತು. ಆ ಸಂದರ್ಭವನ್ನೇ ಬಳಸಿಕೊಂಡು ಇರಾನ್ ಮೇಲೆ ಯುದ್ಧ ಸಾರಲು ಅಮೆರಿಕ ಹೊಂಚುಹಾಕಿತ್ತು. ಆದರೆ, ನೊಬೆಲ್ ಶಾಂತಿ ಪ್ರಶಸ್ತಿಗಾಗಿ ಹಾತೊರೆಯುತ್ತಿದ್ದ ಟ್ರಂಪ್, ಆಗ ಕದನ ವಿರಾಮವೆಂದು ನಾಟಕವಾಡಿದರು. ಆದರೆ, ನೊಬೆಲ್ ಪ್ರಶಸ್ತಿ ಒಲಿಯಲಿಲ್ಲ. ಈಗ, ತಮ್ಮ ಕ್ರೌರ್ಯವನ್ನು ಹೊರಹಾಕುತ್ತಿದ್ದಾರೆ. ಇರಾನ್ ಮೇಲೆ ದಾಳಿ ನಡೆಸಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ, ಇರಾನ್ ಮಾತ್ರವೇ ಸಂಘರ್ಷ, ದಾಳಿ ಅಥವಾ ಯುದ್ಧವನ್ನು ಎದುರಿಸುತ್ತಿಲ್ಲ. ಜಗತ್ತಿನಲ್ಲಿ ಸುಮಾರು 130ಕ್ಕೂ ಹೆಚ್ಚು ಸಶಸ್ತ್ರ ಸಂಘರ್ಷಗಳು ನಡೆಯುತ್ತಿವೆ. ಗಾಜಾ ಮೇಲೆ ಇಸ್ರೇಲ್ ಕಳೆದ 3 ವರ್ಷಗಳಿಂದ ನಿರಂತರ ದಾಳಿ ನಡೆಸುತ್ತಿದ್ದು, 70 ಸಾವಿರಕ್ಕೂ ಹೆಚ್ಚು ಪ್ಯಾಲೆಸ್ತೀನಿಯರನ್ನು ಕೊಂದಿದೆ. 2022ರಿಂದ ನಡೆಯುತ್ತಿರುವ ರಷ್ಯಾ-ಉಕ್ರೇನ್ ಯುದ್ಧಕ್ಕೆ ಸುಮಾರು 77 ಸಾವಿರ ನಾಗಕರಿರು ಬಲಿಯಾಗಿದ್ದಾರೆ. ಅಫ್ಘಾನಿಸ್ತಾನದ ಮೇಲೆ ಪಾಕಿಸ್ತಾನ ಯುದ್ಧ ಘೋಷಿಸಿದ್ದು, ಈವರೆಗೆ ಸುಮಾರು 200ಕ್ಕೂ ಹೆಚ್ಚು ಮಂದಿ ಹತರಾಗಿದ್ದಾರೆ. ಪಾಕಿಸ್ತಾನ-ಭಾರತ ಮತ್ತು ಭಾರತ-ಚೀನಾ ನಡುವೆಯೂ ಗಡಿ ಸಂಘರ್ಷಗಳು ನಡೆಯುತ್ತಲೇ ಇವೆ

ಈ ಸಂಘರ್ಷಗಳಲ್ಲಿ ಅಮೆರಿಕದ ಸ್ವಾರ್ಥಕ್ಕಾಗಿಯೇ ಕೆಲವು ಯುದ್ಧಗಳು ನಡೆಯುತ್ತಿವೆ. ಇಸ್ರೇಲ್ ಮುಂದಿಟ್ಟುಕೊಂಡು ಗಾಜಾ ಮತ್ತು ವೆಸ್ಟ್‌ಬ್ಯಾಂಕ್‌ಗಳ ಮೇಲೆ ನಿಯಂತ್ರಣ ಸಾಧಿಸಲು, ಗಾಜಾವನ್ನು ತನ್ನ ಪ್ರವಾಸೋದ್ಯಮ ತಾಣವಾಗಿ ಮಾಡಿಕೊಳ್ಳಲು ಯತ್ನಿಸುತ್ತಿದೆ. ಉಕ್ರೇನ್ ಮುಖಾಂತರ ರಷ್ಯಾವನ್ನು ಹಣಿಯಬಹುದೇ ಎಂದು ನೋಡುತ್ತಿದೆ. ಮಾತ್ರವಲ್ಲದೆ, ಅಮೆರಿಕವು ನೇರವಾಗಿ ವೆನೆಜುವೆಲಾ ಮೇಲೆ ಆಕ್ರಮಣ ನಡೆಸಿ, ವಶಕ್ಕೆ ಪಡೆದಿದೆ. ಗ್ರೀನ್‌ಲ್ಯಾಂಡ್‌ಅನ್ನು ಆಕ್ರಮಿಸಿಕೊಳ್ಳಲು ತಂತ್ರ-ಕುತಂತ್ರ ಹೆಣೆಯುತ್ತಿದೆ.

ಒಂದೆಡೆ ಹತ್ತಾರು ರಾಷ್ಟ್ರಗಳು ಯುದ್ಧದಲ್ಲಿ ತೊಡಗಿದ್ದರೆ, ಹಲವು ರಾಷ್ಟ್ರಗಳು ಅಂತರ್‌ಯುದ್ಧಗಳು ಮತ್ತು ಘರ್ಷಣೆಯಲ್ಲಿವೆ. ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ ಹಾಗೂ ಶ್ರೀಲಂಕಾದಂತಹ ರಾಷ್ಟ್ರಗಳು ಆಂತರಿಕ ಸಂಘರ್ಷ ಎದುರಿಸಿ, ಹೊಸ ಸರ್ಕಾರಗಳನ್ನು ರಚಿಸಿಕೊಂಡಿವೆ. ಸುಡಾನ್, ಮೆಹನ್ಮಾರ್, ನೈಜೀರಿಯಾ, ಸಿರಿಯಾ, ಇರಾಕ್, ಯೆಮೆನ್ ಹಾಗೂ ಆಫ್ರಿಕಾದ ಹಲವು ಪ್ರಾಂತ್ಯಗಳಲ್ಲಿ ಇಂದಿಗೂ ಅಂತರ್ಯುದ್ಧಗಳು ನಡೆಯುತ್ತಿವೆ.

ಈ ಯುದ್ಧ ಮತ್ತು ಅಂತರ್ಯುದ್ಧಗಳಿಂದಾಗಿ 2020ರಿಂದೀಚೆಗೆ 12ರಿಂದ 15 ಲಕ್ಷ ನಾಗರಿಕರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ವರದಿಗಳು ಹೇಳುತ್ತಿವೆ. ಇಂತಹ ಯುದ್ಧಗಳಿಂದಾಗಿ ದಾಳಿಕೋರ ಮತ್ತು ದಾಳಿಗೆ ಗುರಿಯಾಗುವ ಎರಡೂ ರಾಷ್ಟ್ರಗಳಲ್ಲಿ ಲಕ್ಷಾಂತರ ಜನರ ಸಾವು-ನೋವು, ಕೋಟ್ಯಂತರ ಜನರ ಸ್ಥಳಾಂತರಗೊಳ್ಳುವಿಕೆ, ಹಸಿವು, ರೋಗಗಳು, ಆರ್ಥಿಕ ನಾಶದಂತಹ ಸಮಸ್ಯೆಗಳನ್ನು ಎದುರಿಸುತ್ತಿವೆ.

ಹಾಗಾದರೆ, ಈ ಯುದ್ಧಗಳು ಯಾರಿಗಾಗಿ ನಡೆಯುತ್ತಿವೆ? ಅಮೆರಿಕದಂತಹ ಬಲಿಷ್ಠ ರಾಷ್ಟ್ರಗಳ ಸ್ವಾರ್ಥಕ್ಕಾಗಿಯಷ್ಟೇ. ಈ ರಾಷ್ಟ್ರಗಳು ಇತರ ರಾಷ್ಟ್ರಗಳಲ್ಲಿನ ಭೂಪ್ರದೇಶ, ಅಧಿಕಾರ ಹಾಗೂ ಸಂಪನ್ಮೂಲಗಳ ನಿಯಂತ್ರಣವನ್ನು ತಮ್ಮದಾಗಿಸಿಕೊಳ್ಳಬೇಕೆಂಬ ದಾಹದಿಂದ ನಡೆಯುತ್ತಿವೆ. ಜೊತೆಗೆ, ಅಮೆರಿಕವು ತನ್ನ ಆರ್ಥಿಕ ಲಾಭಕ್ಕಾಗಿ ಶಸ್ತ್ರಾಸ್ತ್ರಗಳನ್ನು ಮಾರಾಟ ಮಾಡಲು ಯುದ್ಧಗಳನ್ನು ಪ್ರಚೋದಿಸುತ್ತಿದೆ. ತಾನೂ ಯುದ್ಧಕ್ಕಿಳಿದಿದೆ.

ಪ್ರಸ್ತುತ, ಜಗತ್ತಿನ ಸಂಘರ್ಷಗಳನ್ನು 3ನೇ ಮಹಾಯುದ್ಧದ ಸೂಚನೆಯೆಂದೂ ಹಲವರು ಬಣ್ಣಿಸುತ್ತಿದ್ದಾರೆ. ಆದರೆ, ಈಗಾಗಲೇ ನಡೆದಿರುವ ಎರಡು ಮಹಾಯುದ್ಧಗಳಿಂದ ಜಗತ್ತಿನ ಸಾಮಾನ್ಯ ಜನರಿಗಾದ ಲಾಭವಾದರೂ ಏನು? ಆಗ ಸಂಭವಿಸಿದ್ದೂ ಮಾರಣಹೋಮಗಳೇ. ಅದರಿಂದ, ಲಾಭ ಮಾಡಿಕೊಂಡವರು ಆಳುವವರು ಮಾತ್ರವೇ!

ಇತ್ತೀಚಿನ ವರ್ಷಗಳಲ್ಲಿ ಯುದ್ಧ-ಸಂಘರ್ಷವನ್ನು ಎರಡು ಆಯಾಮಗಳಲ್ಲಿ ನೋಡಲಾಗುತ್ತಿದೆ. ಒಂದು, ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರವನ್ನು ತನ್ನ ಸ್ವಾರ್ಥಕ್ಕಾಗಿ ಬಲಿಪಡೆಯುವುದು. ಮತ್ತೊಂದು, ಆಳುವವರು ತಮ್ಮ ಆಡಳಿತದ ವೈಫಲ್ಯವನ್ನು ಮುಚ್ಚಿಟ್ಟುಕೊಳ್ಳಲು ಮತ್ತೊಂದು ರಾಷ್ಟ್ರದೊಂದಿಗೆ ಸೆಣೆಸಾಡುವುದು. ಭಾರತದ ಮೋದಿ ಸರ್ಕಾರದ್ದು ಎರಡನೇ ಆಯ್ಕೆ. ಅಮೆರಿಕ-ಇಸ್ರೇಲ್‌ನಂತಹ ಕ್ರೂರಿಗಳದ್ದು ಮೊದಲ ಆಯ್ಕೆ.

ಸದ್ಯ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ, ಇರಾನ್, ಇಸ್ರೇಲ್ ಸೇರಿದಂತೆ ಹತ್ತಾರು ರಾಷ್ಟ್ರಗಳು ನಿರುದ್ಯೋಗ, ಹಣದುಬ್ಬರ, ಬಡತನದಂತಹ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿವೆ. ಈ ಎಲ್ಲ ರಾಷ್ಟ್ರಗಳ ಜನರು ನೆಮ್ಮದಿಯ ಬದುಕಿಗಾಗಿ, ಸುಭದ್ರ ಉದ್ಯೋಗ ಮತ್ತು ಶಾಂತಿಗಾಗಿ ಹೋರಾಟ ನಡೆಸುತ್ತಿದ್ದಾರೆ.

ಕಳೆದೊಂದು ದಶಕದಿಂದ ಯುದ್ಧ ಬೇಡ ಶಾಂತಿ ಬೇಕು ಎಂಬ ಘೋಷಣೆ ಜಗತ್ತಿನಾದ್ಯಂತ ಕೇಳಿಬರುತ್ತಿದೆ. ಶಾಂತಿ ಸಮ್ಮೇಳನಗಳಲ್ಲಿ, ರ್ಯಾಲಿಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ, ರಾಜಕೀಯ ವೇದಿಕೆಗಳಲ್ಲಿ ಈ ಮಾತು ಮಾರ್ದನಿಸುತ್ತಿದೆ. ಶಾಂತಿಗಾಗಿ, ಮಾನವೀಯತೆಗಾಗಿ ಹಂಬಲಿಸುತ್ತಿದೆ.

ಬಲಿಷ್ಠರ ಯುದ್ಧ ದಾಹದಿಂದ ಸಂಘರ್ಷಗಳು ನಿಲ್ಲುತ್ತಿಲ್ಲ. ನಿಂತರೂ ಅದು ಶಾಶ್ವತವಲ್ಲ. ಪ್ರಸ್ತುತ ಸಂದರ್ಭದಲ್ಲಿ ಶಾಂತಿಯ ದಾರಿ ಜಟಿಲವಾಗಿದೆ. ಶಾಂತಿಯನ್ನು ಸಾಕಾರಗೊಳಿಸಲು ಜಗತ್ತಿನ ನಾಗರಿಕರು ಒಗ್ಗಟ್ಟಾಗಿ ನಿಲ್ಲಬೇಕಿದೆ.

ಕೇಜ್ರಿವಾಲ್ ಪ್ರಕರಣ : ಕರ್ಮ ರಿಟರ್ನ್ಸ್ ಎನ್ನುವುದು ಇದಕ್ಕೆ ತಾನೇ?

ಅಂದ ಹಾಗೆ ಈಗ ಅಳುತ್ತಿರುವ ಕೇಜ್ರಿವಾಲ್ 2013 ರಲ್ಲಿ ಪ್ರಾಮಾಣಿಕರೂ, ಪ್ರಖ್ಯಾತ ಅರ್ಥಶಾಸ್ತ್ರಜ್ಞರೂ ಆಗಿದ್ದ ಅಂದಿನ ಪ್ರಧಾನಿ ಮನಮೋಹನ ಸಿಂಗ್ ರನ್ನು ಭ್ರಷ್ಟಾಚಾರ ನಡೆಸುವವರಿಗೆ ನೆರವು ನೀಡುತ್ತಿದ್ದಾರೆಂಬಂತೆ ಬಾಯಿಗೆ ಬಂದಂತೆ ಮಾತನಾಡಿದ್ದ. ಅಷ್ಟೇ ಅಲ್ಲ ನಡೆಯದೇ ಇದ್ದ ಹಗರಣವನ್ನು ಲಕ್ಷಾಂತರ ಕೋಟಿ ಹಗರಣ ಎಂದು ಬಿಂಬಿಸಿ, ಜನರ ದಾರಿ ತಪ್ಪಿಸಿದ್ದ. ಅಂದು ಮನಮೋಹನ್ ಸಿಂಗ್ ಅವರು ''ಯಾರೇ ನನ್ನ ಕುರಿತು ಏನೇ ಆರೋಪಿಸಿದರೂ ಇತಿಹಾಸ ತನಗೆ ನ್ಯಾಯ ಒದಗಿಸುತ್ತೆ ಎನ್ನುವ ನಂಬಿಕೆ ಇದೆ'' ಎಂದಿದ್ದರು. ಈಗ ಆ ಮಾತು ದಿಟವಾಗಿದೆ.

ಮೊನ್ನೆ ಮಾಧ್ಯಮಗಳೆದುರು ಗಳಗಳನೆ ಕಣ್ಣೀರಧಾರೆ ಹರಿಸುತ್ತಾ ನಾನು ಭ್ರಷ್ಟಾಚಾರಿ ಅಲ್ಲ ಎಂದು ಕೋರ್ಟ್ ಹೇಳಿದೆ ಎನ್ನುತ್ತಿದ್ದ ದೆಹಲಿಯ ಮಾಜಿ ಸಿ.ಎಂ. ಅರವಿಂದ ಕೇಜ್ರಿವಾಲ್ ರನ್ನು ಕಂಡಾಗ ಮಾಡಿದ್ದುಣ್ಣೋ ಮಹಾರಾಯ ಎನ್ನುವ ನಾಣ್ನುಡಿ ನೆನಪಾಯಿತು. ಯುಪಿಎ ಸರಕಾರದ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸಿ, ನಕಲಿ ಹೋರಾಟಗಾರರ ನಾಟಕ ಕಂಪೆನಿ ಕಟ್ಟಿ, 2014 ರಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಅಧಿಕಾರಕ್ಕೆ ಬರಲು ಪರೋಕ್ಷವಾಗಿ ಶ್ರಮಿಸಿದ್ದ ಈ ಅಳುಮುಂಜಿ ಕೇಜ್ರಿವಾಲ್ ಇಂದು ಹರಿಸಿದ್ದು ಪಶ್ಚಾತ್ತಾಪದ ಕಣ್ಣೀರು.! ನಿಜ ಅಂದು ಇದೇ ಬಿಜೆಪಿಯ ಸೂಚನೆಯಂತೆ ಇಡೀ ದೇಶದ ಜನಸಾಮಾನ್ಯರು ಮಾತ್ರವಲ್ಲದೇ ಪ್ರಜ್ಞಾವಂತರು ನಂಬುವಂತೆ ಪ್ರಹಸನ ಹೆಣೆದು, ಸ್ವತ: ಪಾತ್ರಧಾರಿಯಾಗಿದ್ದ ಈತ ತಾನು ಮಾಡಿದ ಪಾಪ ತನ್ನನ್ನೇ ಸುತ್ತಿಕೊಳ್ಳುವಂತಹ ದುರವಸ್ಥೆಯನ್ನು ಅನುಭವಿಸುತ್ತಿದ್ದಾನೆ ಎಂದರೆ ತಪ್ಪಾಗಲಾರದು

ಹೌದು, ಅದು 2011ರಲ್ಲಿ ಪ್ರಾರಂಭಗೊಂಡ ಅಣ್ಣಾ ಹಜಾರೆ ಎನ್ನುವ ಸ್ವಘೋಷಿತ ಗಾಂಧಿವಾದಿಯ ಸತ್ಯಾಗ್ರಹದ ಕಾಲ. ಅದಾಗ ಡಾ.ಮನಮೋಹನ ಸಿಂಗ್ ಅವರು ಪ್ರಧಾನಿಯಾಗಿದ್ದ ಯುಪಿಎ ಸರಕಾರ ಅಸ್ತಿತ್ವದಲ್ಲಿದ್ದ ಕಾಲಘಟ್ಟ, ಮಹಾರಾಷ್ಟ್ರದ ಹಳ್ಳಿಯಲ್ಲಿದ್ದ ಅಣ್ಣಾ ಹಜಾರೆ ಡೆಲ್ಲಿಗೆ ಬಂದು ಲೋಕಪಾಲ್ ಮಸೂದೆಯನ್ನು ಜಾರಿಗೆ ತರಬೇಕೆಂದು ಪ್ರಾರಂಭಿಸಿದ ಹೋರಾಟ 2013ರ ವರೆಗೂ ಮುಂದುವರೆದಿತ್ತು. ಜಂತರ್ ಮಂತರ್ ನಲ್ಲಿ ಸತ್ಯಾಗ್ರಹ ಕುಳಿತ ಹಜಾರೆಯ ಅಕ್ಕಪಕ್ಕದಲ್ಲಿ ಸಮಯಸಾಧಕ ನಕಲಿ ಹೋರಾಟಗಾರರು ಬಂದು ಕುಳಿತರು. ನಿವೃತ್ತ ಐಎಫ್ ಎಸ್ ಅಧಿಕಾರಿ ಅರವಿಂದ ಕೇಜ್ರಿವಾಲ್, ನಿವೃತ್ತ ಐಪಿಎಸ್ ಅಧಿಕಾರಿ ಕಿರಣ್ ಬೇಡಿ, ಸನ್ಯಾಸಿ ಮುಖವಾಡ ಹೊತ್ತ ಬ್ಯುಸಿನೆಸ್ ಮ್ಯಾನ್ ರಾಮ್ ದೇವ್ ಬಾಬಾ ಸೇರಿದಂತೆ ಹಲವಾರು ಮಂದಿ ಹೋರಾಟದ ಪ್ರಹಸನದಲ್ಲಿ ಪಾಲ್ಗೊಂಡರು. ತೆರೆಯ ಮರೆಯಲ್ಲಿದ್ದ ಬಿಜೆಪಿ ಕಾಂಗ್ರೆಸ್ ಅನ್ನು ಮಣಿಸಲು ಹೂಡಿದ ಷಡ್ಯಂತ್ರ ಇದಾಗಿತ್ತು ಎನ್ನುವುದು ಅನಂತರ ಅರಿವಿಗೆ ಬಂದ ವಿಚಾರ. ಕಾಮನ್ ವೆಲ್ತ್ ಗೇಮ್ಸ್ ದೆಹಲಿಯಲ್ಲಿ ನಡೆದಾಗ ಆಗಿದೆ ಎನ್ನಲಾದ ಭ್ರಷ್ಟಾಚಾರದ ಹಗರಣ, 2ಜಿ ಸ್ಪೆಕ್ಟ್ರಮ್ ಹಗರಣ, ಸ್ವಿಸ್ ಬ್ಯಾಂಕ್ ನಲ್ಲಿನ ಕಪ್ಪುಹಣದ ವಿಚಾರ ಹೀಗೆ ಸಾಲು ಸಾಲು ಹಗರಣಗಳ ಹೆಸರಿನಲ್ಲಿ ಲಕ್ಷಾಂತರ ಕೋಟಿ ಲೂಟಿಯಾಗಿದೆ ಎಂದೂ, ಅದಕ್ಕೆ ಕೇಂದ್ರ ಸರಕಾರವೇ ಹೊಣೆಯೆಂದೂ, ಮೇಧಾವಿಗಳಾಗಿದ್ದ ಅಂದಿನ ಪ್ರಧಾನಿ ಡಾ.ಮನಮೋಹನ್ ಸಿಂಗ್ ರತ್ತ ಎಲ್ಲರೂ ಬೊಟ್ಟು ತೋರಿಸಿ ಬೇಕಾಬಿಟ್ಟಿ ಮಾತನಾಡತೊಡಗಿದರು.

ಈ ರಾಜಕೀಯ ಪ್ರೇರಿತವಾದ ಹೋರಾಟದ ಪ್ರಹಸನದಲ್ಲಿ ಈ ಕೇಜ್ರಿವಾಲ್ ಪಾತ್ರ ಮಹತ್ತರವಾದದ್ದು ಇವರ ಹೋರಾಟ, ಮಾತು, ಆರೋಪಗಳ ಪ್ರತಿಫಲವಾಗಿ 2014ರಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಅಧಿಕಾರ ಕಳೆದುಕೊಂಡು ಬಿಜೆಪಿ ನೇತೃತ್ವದ ಎನ್ ಡಿ ಎ ಅಧಿಕಾರಕ್ಕೇರಿತು ಅನಂತರ ಅಣ್ಣಾಹಜಾರೆ ಬಹಿರಂಗವಾಗಿ ಎಲ್ಲೂ ಕಾಣಿಸಿಕೊಳ್ಳದೆ ಮೌನಿಯಾದರು. ಇತ್ತ ಕೇಜ್ರಿವಾಲ್ ಆಮ್ ಆದ್ಮಿ ಪಾರ್ಟಿ ಕಟ್ಟಿ ದೆಹಲಿಯಲ್ಲಿ ಬಹುಮತ ಪಡೆದು ಸಿ.ಎಂ.



ಆದರೆ ಅತ್ತ ಕಿರಣ್ ಬೇಡಿ ಬಿಜೆಪಿ ಸೇರಿ ಪಾಂಡಿಚೇರಿಯ ಲೆಫ್ಟಿನೆಂಟ್ ಗವರ್ನರ್ ಆದರು ರಾಮ್ ದೇವ್ ಬಾಬಾ ತನ್ನ ಕಂಪೆನಿ ಪತಂಜಲಿಯ ಉತ್ಪನ್ನಗಳಿಗೆ ತೆರಿಗೆ ವಿನಾಯತಿ ಪಡೆದುಕೊಂಡರು ಅವರೆಲ್ಲಾ ಮಾಡಿದ್ದ ಆರೋಪಗಳ ತನಿಖೆ ನಡೆದು ಹಗರಣಗಳ ಗಂಭೀರತೆಯೇ ಪ್ರಶ್ನಾರ್ಹವಾಗಿದ್ದಲ್ಲದೆ ಯಾವೊಬ್ಬ ಆರೋಪಿಯೂ ಅಪರಾಧಿ ಆಗಲಿಲ್ಲ. ಅತ್ತ ಸ್ವಿಸ್ ಬ್ಯಾಂಕ್ ನಿಂದ ಒಂದೇ ಒಂದು ರೂಪಾಯಿ ಮೋದಿ ಸರಕಾರದ ಅವಧಿಯಲ್ಲಿ ಭಾರತಕ್ಕೆ ತರುವುದು ಬಿಡಿ, ಸ್ವಿಸ್ ಬ್ಯಾಂಕ್ ನಲ್ಲಿನ ಕಪ್ಪುಹಣದ ಪ್ರಮಾಣ ಮತ್ತಷ್ಟು ಹೆಚ್ಚಾಯಿತು ಹಾಗಾದರೆ ಇವರೆಲ್ಲಾ ಸೇರಿ ಮಾಡಿದ್ದು ಹೋರಾಟದ ಹೆಸರಿನಲ್ಲಿ ರಾಜಕೀಯದ ರಂಗಿನಾಟವಲ್ಲದೆ ಬೇರೆನಲ್ಲ!

2014ರ ನಂತರ ದೇಶದಲ್ಲಿ ಕೇಂದ್ರ ಸರಕಾರ ಜಾರಿಗೆ ತರಲು ಉದ್ದೇಶಿಸಿದ್ದ ನಾಲ್ಕು ಕೃಷಿ ಮಸೂದೆ ವಿರೋಧಿಸಿ ದೆಹಲಿಯಲ್ಲಿ ವರ್ಷಗಟ್ಟಲೆ ನಡೆದ ರೈತ ಹೋರಾಟದಲ್ಲಿ ಈ ನಕಲಿ ಹೋರಾಟಗಾರರು ಭಾಗವಹಿಸಲಿಲ್ಲ, ಮಹಿಳಾ ಕುಸ್ತಿಪಟುಗಳು ತಮ್ಮ ಮೇಲೆ ಲೈಂಗಿಕ ಶೋಷಣೆ ಆಗಿದೆ ಎಂದು ದೆಹಲಿಯ ಬೀದಿಯಲ್ಲಿ ಪ್ರತಿಭಟಿಸುವಾಗ ಇವರಾರೂ ಬರಲಿಲ್ಲ. ಇನ್ನು ಇತ್ತೀಚೆಗೆ ದೇಶದ ರೈತರ ಹಿತಾಸಕ್ತಿಯನ್ನು ಬಲಿಗೊಟ್ಟು ಟ್ರಂಪ್ ಗೆ ಹೆದರಿ ಅಮೇರಿಕಾ ಭಾರತ ವ್ಯಾಪಾರ ಒಪ್ಪಂದಕ್ಕೆ ಮೋದಿ ಸರಕಾರ ಸಹಿ ಹಾಕಿದಾಗಲೂ ಈ ಅವಕಾಶವಾದಿ ಹೋರಾಟಗಾರರು ಧ್ವನಿ ಎತ್ತಿಲ್ಲ ಅಂದರೆ ಇವರೆಲ್ಲಾ ಬಿಜೆಪಿಯನ್ನು ಕೇಂದ್ರದಲ್ಲಿ ಅಧಿಕಾರಕ್ಕೇರಿಸಲು ಅವಿರತ ಪ್ರಯತ್ನಿಸಿದ ಮುಖವಾಡಧಾರಿಗಳು ಎನ್ನುವುದು ನಿಜ.

ಇನ್ನು ಈ ಕೇಜ್ರಿವಾಲ್ ದೆಹಲಿಯ ಸಿ.ಎಂ. ಆದ ಮೇಲೆ ಬಿಜೆಪಿಯ ಸಹಜ ಗುಣವಾದ ''ನೆರವಾದವರನ್ನೇ ಮುಗಿಸುವ'' ಪ್ರಯತ್ನ ಪ್ರಾರಂಭವಾಯಿತು. ಮೊದಲು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಮೂಲಕ ಕಿರುಕುಳ ನೀಡತೊಡಗಿದರು. ದೆಹಲಿ ಸರಕಾರ ಮತ್ತು ಲೆಫ್ಟಿನೆಂಟ್ ಗವರ್ನರ್ ನಡುವಿನ ತಿಕ್ಕಾಟ ನ್ಯಾಯಾಲಯದ ಮೆಟ್ಟಿಲೇರುವ ವರೆಗೆ ಹೋಯಿತು. ಎರಡನೇ ಬಾರಿ ಕೇಜ್ರಿವಾಲ್ ಸಿ.ಎಂ. ಆಗುತ್ತಿದ್ದಂತೆ ಬಿಜೆಪಿಯ ತಾಳ್ಮೆಯ ಕಟ್ಟೆ ಒಡೆಯಿತು ಹೇಗಾದರೂ ಮಾಡಿ ಆಪ್ ಸರಕಾರವನ್ನು ಅಧಿಕಾರದಿಂದ ಇಳಿಸಲು ಷಡ್ಯಂತ್ರ ರಚನೆಯಾಯಿತು. ಅದೇ ಅಬಕಾರಿ ಹಗರಣ, ಕೇಂದ್ರ ಸರಕಾರದ ಗುಲಾಮ ಸಂಸ್ಥೆ ಇಡಿ, ಸಿಬಿಐ ತಮ್ಮ ಕಾರ್ಯಾಚರಣೆ ಶುರು ಮಾಡಿದವು ಅದರ ಪರಿಣಾಮವಾಗಿ ಮೊದಲು ಡಿಸಿಎಂ ಸಿಸೋಡಿಯಾ ಜೈಲು ಪಾಲಾದರೆ, ಸಿ.ಎಂ. ಕೇಜ್ರಿವಾಲ್ ಅಧಿಕಾರದಲ್ಲಿರುವಾಗಲೇ ಜೈಲುವಾಸ ಅನುಭವಿಸಿದರು. ಅಂತೂ 2025 ರಲ್ಲಿ ದೆಹಲಿಯಲ್ಲಿ ಚುನಾವಣೆ ನಡೆದಾಗ ಬಿಜೆಪಿ ವಾಮಮಾರ್ಗದಲ್ಲಿ ಆಮ್ ಆದ್ಮಿ ಪಾರ್ಟಿಯನ್ನು ಸೋಲಿಸಿ, ಅಧಿಕಾರವನ್ನು ಪಡೆಯಲು ಯಶಸ್ವಿಯಾಯಿತು. ಈಗ ನ್ಯಾಯಾಲಯ ಅಬಕಾರಿ ಹಗರಣವೇ ಒಂದು ವಿಚಾರಣೆಗೆ ಯೋಗ್ಯವಲ್ಲದ ನಿರಾಧಾರ ವಿಚಾರ ಎಂದು ಕೇಜ್ರಿವಾಲ್ ಸೇರಿದಂತೆ 23 ಆರೋಪಿಗಳನ್ನು ನಿರ್ದೋಷಿಗಳೆಂದು ಖುಲಾಸೆಗೊಳಿಸಿದೆ. ಕೇಜ್ರಿವಾಲ್ ಹೊರಗೆ ಬಂದು ಕಣ್ಣೀರು ಹರಿಸಿ ತಾನು ಭ್ರಷ್ಟಾಚಾರಿ ಅಲ್ಲ ಎಂದು ನ್ಯಾಯಾಲಯ ಹೇಳಿದೆ, ಮೋದಿ ಮತ್ತು ಶಾ ದೇಶದ ಜನರ ಕ್ಷಮೆಯಾಚಿಸಬೇಕು ಎಂದು ಬಡಬಡಾಯಿಸುತ್ತಿದ್ದಾರೆ.

ಕೇಜ್ರಿವಾಲ್ ಅಪರಾಧ ಎಸಗಿಲ್ಲ ಎಂಬುದು ಬಿಜೆಪಿಗೂ ಗೊತ್ತು, ಇಡಿ-ಸಿಬಿಐಗೂ ಗೊತ್ತಿತ್ತು. ಆದರೆ ಅಧಿಕಾರವನ್ನು ಕಸಿದುಕೊಳ್ಳಲು ಹೀಗೆ ನಡೆಯದ ಹಗರಣವನ್ನು ನಡೆದಿದೆ ಎಂದು ಬಿಂಬಿಸಿ, ಜನರು ನಂಬುವಂತೆ ಮಾಡಿ ಆಪ್ ಅನ್ನು ಸೋಲಿಸಿದ್ದಾರೆ ಮೋದಿ-ಶಾ. ಇದೇ ವಿಚಾರದಲ್ಲಿ ಮೋದಿ, ಶಾ ಸೇರಿದಂತೆ ಬಿಜೆಪಿಯ ದೊಡ್ಡ ದೊಡ್ಡ ನಾಯಕರು ಕೇಜ್ರಿವಾಲ್ ದೊಡ್ಡ ಕಳ್ಳ ಎಂದು ಚುನಾವಣಾ ಭಾಷಣದಲ್ಲಿ, ಮಾಧ್ಯಮಗಳ ಮುಂದೆ, ಚರ್ಚೆಯ ಸಂದರ್ಭದಲ್ಲಿ ಆರೋಪಿಸಿದ್ದರು. ಈಗ ಆರೋಪಿತರೆಲ್ಲ ನಿರಪರಾಧಿಗಳೆಂದು ನ್ಯಾಯಾಲಯ ಹೇಳಿದೆ. ಅಲ್ಲಿಗೆ ದೇಶದ ಪ್ರಧಾನಿ, ಗೃಹ ಸಚಿವರೂ ಕೂಡ ಬೇಜವಾಬ್ದಾರಿಯ ಹೇಳಿಕೆ ನೀಡುತ್ತಾ ಜನರ ದಾರಿ ತಪ್ಪಿಸುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗಿದೆ.

ಅಂದ ಹಾಗೆ ಈಗ ಅಳುತ್ತಿರುವ ಕೇಜ್ರಿವಾಲ್ ಕುರಿತು ಕಿಂಚಿತ್ತೂ ಕರುಣೆ ತೋರಿಸುವ ಅವಶ್ಯಕತೆಯಿಲ್ಲ. ಇದೇ ಮನುಷ್ಯ 2013 ರಲ್ಲಿ ಪ್ರಾಮಾಣಿಕರೂ, ಪ್ರಖ್ಯಾತ ಅರ್ಥಶಾಸ್ತ್ರಜ್ಞರೂ ಆಗಿದ್ದ ಅಂದಿನ ಪ್ರಧಾನಿ ಮನಮೋಹನ ಸಿಂಗ್ ರನ್ನು ಭ್ರಷ್ಟಾಚಾರ ನಡೆಸುವವರಿಗೆ ನೆರವು ನೀಡುತ್ತಿದ್ದಾರೆಂಬಂತೆ ಬಾಯಿಗೆ ಬಂದಂತೆ ಮಾತನಾಡಿದ್ದ. ಅಷ್ಟೇ ಅಲ್ಲ ನಡೆಯದೇ ಇದ್ದ ಹಗರಣವನ್ನು ಲಕ್ಷಾಂತರ ಕೋಟಿ ಹಗರಣ ಎಂದು ಬಿಂಬಿಸಿ, ಜನರ ದಾರಿ ತಪ್ಪಿಸಿದ್ದ. ಅಂದು ಮನಮೋಹನ್ ಸಿಂಗ್ ಅವರು ''ಯಾರೇ ನನ್ನ ಕುರಿತು ಏನೇ ಆರೋಪಿಸಿದರೂ ಇತಿಹಾಸ ತನಗೆ ನ್ಯಾಯ ಒದಗಿಸುತ್ತೆ ಎನ್ನುವ ನಂಬಿಕೆ ಇದೆ'' ಎಂದಿದ್ದರು. ಈಗ ಆ ಮಾತು ದಿಟವಾಗಿದೆ. ಪ್ರಾಮಾಣಿಕರ ಮೇಲೆ ಭ್ರಷ್ಟಾಚಾರದ ಮಸಿ ಎರಚಿದರೆ ಅದು ತನ್ನನ್ನೂ ಒಂದಲ್ಲ ಒಂದು ದಿನ ಬೆತ್ತಲಾಗಿ ನಿಲ್ಲಿಸುತ್ತೆ ಎಂಬಂತಾಗಿದೆ ಈ ಕೇಜ್ರಿವಾಲ್ ನ ಪ್ರಕರಣ. ಈತ ಒಬ್ಬ ವಿದ್ಯಾವಂತ ಮೋಸಗಾರ ಎಂದರೆ ತಪ್ಪಾಗಲಾರದು. ಏಕೆಂದರೆ ನಡೆಯದ ಹಗರಣವನ್ನು ಸುಳ್ಳು ಅಂಕಿಅಂಶದೊಂದಿಗೆ ಮುಗ್ಧಜನರೆದುರು ವರ್ಷಗಟ್ಟಲೆ ಒದರಿ, ದೇಶದ ರಾಜಕೀಯವೇ ಬದಲಾಗುವಂತೆ ಮಾಡಿದವ. ಈಗ ಕೇಜ್ರಿವಾಲ್ ಮೋದಿ ಶಾ ಕುರಿತು ಏನೇ ಆರೋಪ ಮಾಡಿದರೂ ಅವರನ್ನು ಏನೂ ಮಾಡಲಾಗದು ಮಾತ್ರವಲ್ಲ ಈತನ ಕಣ್ಣೀರಿನ ಪ್ರಹಸನವನ್ನು ಯಾರೂ ನಂಬಲಾರರು. ಈ ಪ್ರಸಂಗ ಗಮನಿಸಿದಾಗ ಕರ್ಮ ರಿಟರ್ನ್ಸ್ ಅನ್ನೋದು ಸುಳ್ಳಲ್ಲ ಅನ್ನಿಸುತ್ತದೆ.

ಕನ್ನಡವೆಂದರೆ ಭಾಷೆ ಸಾಹಿತ್ಯವಲ್ಲ ನಮ್ಮ ಸಂಸ್ಕೃತಿಯ ಪ್ರತೀಕ : ಸಿದ್ದರಾಮ ಹೊನ್ಕಲ್

ಮಾನ್ವಿ,ಫೆ.28-

ಬರಹಗಾರನಿಗೆ ಕ್ರಿಯಾಶೀಲತೆ ಅತಿ ಮುಖ್ಯವಾದುದು ಎನ್ನುವುದನ್ನು ಮರೆಯಬಾರದು ರಾಯಚೂರು ಜಿಲ್ಲೆಯಿಂದ ದಾಸ ಸಾಹಿತ್ಯದ ಕೊಡುಗೆ ಅಪಾರ ಮತ್ತು ಮಾನವೀಯ ಮೌಲ್ಯದ ಕವಿತೆಗಳ ತಾಣವಾಗಿದ್ದು ಅವುಗಳನ್ನು ಹುಡಕಬೇಕಾದ ಕೆಲಸ ಇಂದಿನ ಸಮ್ಮೇಳನಗಳು ಮಾಡಬೇಕಿದೆ. ಕನ್ನಡವೆಂದರೆ ಕೇವಲ ಭಾಷೆ ಸಾಹಿತ್ಯವಲ್ಲ, ನಮ್ಮ ಸಂಸ್ಕೃತಿಯಾಗಬೇಕು ನಾವೆಲ್ಲರೂ ನಾಡು ನುಡಿ ಕಟ್ಟುವ ಕಾರ್ಯವಾಗ ಬೇಕಿದೆ ಎಂದು ಹೆಸರಾಂತ ಸಾಹಿತಿ ಸಿದ್ದರಾಮ ಹೊನ್ಕಲ್ ಹೇಳಿದರು.



ನೀರಮಾನ್ವಿ ಗ್ರಾಮದ ಸಿದ್ಧಾರೂಢ ಮಠದ ಅವರಣದಲ್ಲಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್ ಹಮ್ಮಿಕೊಂಡಿದ್ದ 11ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರುಬರವಣಿಗೆ ಎನ್ನುವುದು ಮನೋವೈಜ್ಞಾನಿಕ ಕ್ರಮವಾಗಿದೆ. ಜಾತಿ ಉಪಜಾತಿ ಸಂಕೋಲೆಯಲ್ಲಿ ಬಂದಿಯಾಗಿರುವ ಇಂತಹ ಸಮಯದಲ್ಲಿ ಬರಹಗಾರರಿಗೆ ಕ್ರಿಯಾಶೀಲತೆ ಮುಖ್ಯವಾಗಿದೆ. ವಿಜಯದಾಸರು, ಮನೋಹರ ವಿಠಲ ದಾಸರು, ಜಗನ್ನಾಥ ದಾಸರು, ಮಾನ್ವಿ ತಾಲೂಕನ್ನು ದಾಸಸಾಹಿತ್ಯದ ತೊಟ್ಟಿಲಾಗಿಸಿದ್ದಾರೆ. ಅವಿಭಾಜಿತ ಕೊಪ್ಪಳ ಜಿಲ್ಲೆಯಲ್ಲಿ ಬೆಟ್ಟದೂರು ಕುಟುಂಬದ ಕೊಡುಗೆ ಅಪಾರವಾಗಿದೆ.

ಆ ಕುಟುಂಬದ ಡಾ.ಬಸವಪ್ರಭು ಪಾಟೀಲ್ ಬೆಟ್ಟದೂರು ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾ ಗಿರುವುದು ವಿಶೇಷವಾಗಿದ್ದು. ಈ ನೆಲ ರಜಾಕರರ ಹಾಗೂ ನವಾಬರ ದುರಾಡಳಿತದ ಕಥಾನಕಗಳು ಜನಪದ ಸಾಹಿತ್ಯ ಹೋರಾಟದ ಕಿಚ್ಚನ್ನು ಹಚ್ಚಿದೆ. ಈ ನೆಲವು ದಾಸ ಸಾಹಿತ್ಯದ ವಚನ ಸಾಹಿತ್ಯ ಬಂಡಾಯ ಸಾಹಿತ್ಯದ ಪ್ರಮುಖ ನೆಲೆಯಾಗಿದ್ದು ಭಾಷೆಯ ಉಗಮದಿಂದ ಸಾಹಿತ್ಯದ ಉಗಮವಾಗುತ್ತದೆ. ಸಾಮಾಜಿಕ ಜವಾಬ್ದಾರಿಯಿಂದ ಸಾಮಾಜಿಕ ಪ್ರಜ್ಞೆ ಹೊಂದಿ ಸಾಹಿತ್ಯ ರಚಿಸುವುದು ಮುಖ್ಯವಾಗಿದುದು ಎಂದು ಸಿದ್ದರಾಮ ಹೊನ್ಕಲ್ ಹೇಳಿದರು.

ಈ ಸಂದರ್ಭದಲ್ಲಿ ಸಣ್ಣ ನೀರಾವರಿ ಮತ್ತು ವಿಜ್ಞಾನ ತಂತ್ರಜ್ಞಾನ ಸಚಿವ ಎನ್.ಎಸ್ ಬೋಸರಾಜು, ಶಾಸಕ ಜಿ.ಹಂಪಯ್ಯನಾಯಕ ಸಾಹುಕಾರ, ಮಾಜಿಶಾಸಕರಾದ ಬಸನಗೌಡ ಬ್ಯಾಗವಾಟ್, ಗಂಗಾಧರನಾಯಕ, ರಾಜಾವೆಂಕಟಪ್ಪನಾಯಕ, ಕಲ್ಮಠದ ಶ್ರೀವಿರೂಪಾಕ್ಷ ಪಂಡಿತರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು,ಜನಾಬ್ ಮುಫ್ತಿ ಮೌಲಾನಾ ಸೈಯದ್ ಹಸನ್ ಜಿಶಾನ್ ಖಾದ್ರಿ, ಫಾ.ವಿನ್ಸೆಂಟ್ ಸುರೇಶ ಸೆಂಟ್ ಮೇರಿಸ್ ಚರ್ಚ್, ದೇವೇಂದ್ರಪ್ಪ ತಾತ, ಸಿದ್ದಾರೂಢ ಮಠ ನೀರಮಾನ್ವಿ, ಸಮ್ಮೇಳನ ಅಧ್ಯಕ್ಷ ಡಾ.ಬಸವಪ್ರಭು ಪಾಟೀಲ್ ಬೆಟ್ಟದೂರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರಂಗಣ್ಣ ಅಳ್ಳುಂಡಿ, ಮಾನ್ವಿ ತಾಲೂಕ ಅಧ್ಯಕ್ಷ ಶರಣಬಸವ ನೀರಮಾನ್ವಿ, ಸಾಹಿತಿ ರಮೇಶಬಾಬು ಯಾಳಗಿ, ಎ.ಬಾಲಸ್ವಾಮಿ ಕೊಡ್ಲಿ, ಶಿವರಾಜನಾಯಕ ಸಾಹುಕಾರ, ಜಿಕಸಾಪ ಗೌರವ ಕಾರ್ಯದರ್ಶಿ ತಾಯಪ್ಪ ಬಿ.ಹೊಸೂರು, ಲಕ್ಷ್ಮೀದೇವಿನಾಯಕ, ಚನ್ನಪ್ಪಗೌಡ ಬೆಟ್ಟದೂರು, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಸಿದ್ದರಾಮಪ್ಪ , ಗುವಾಮ್ಮ ಬಸವರಾಜ್, ಹನುಮಂತಪ್ಪ ಕೊಟ್ನೆಕಲ್, ಹೆಚ್.ಶರ್ಫುದ್ದೀನ್ ಪೋತ್ನಾಳ, , ದೊಡ್ಡಬಸಪ್ಪಗೌಡ ಭೋಗಾವತಿ, ಅಬ್ದುಲ್ ಗಫೂರ್ ಸಾಬ್, ಬಿ.ಕೆ ಅಮರೇಶಪ್ಪ, ಸಿದ್ದನಗೌಡ ರಾಯಚೂರ್, ಮಲ್ಲಿಕಾರ್ಜುನಗೌಡ ಪೋತ್ನಾಳ, ರಾಜಾಸುಭಾಷಚಂದ್ರನಾಯಕ , ಪತ್ರಕರ್ತರ ಸಂಘದ ಅಧ್ಯಕ್ಷ ಅಶೋಕ ತಡಕಲ್, ಅರಕೇರಿ ರಾಮಣ್ಣ, ಬುಡ್ಡುಸಾಬ್, ಶ್ರೀರಾಮುಲು, ಕೆ.ಅಲ್ಲಾಭಕ್ಷ ಸೇರಿದಂತೆ ಇನ್ನಿತರರಿದ್ದರು.

ಜಾತಿ ವಿನಾಶವಾಗದೆ.ವರ್ಗ ಹೋರಾಟ ಯಶಸ್ವಿಯಾಗದು- ಆರ್. ಮಾನಸಯ್ಯ

ಸಿಂಧನೂರು,ಮಾ.01-

ದಿನಾಂಕ:28-02-2026. ರಂದು ಸಿಂಧನೂರು ನಗರದ. ಮಿಲಾಪ್ ಶಾದಿ. ಮಹಲ್ ನಲ್ಲಿ. ಸಿ ಪಿ ಐ. ಎಂಎಲ್. ರೆಡ್ ಸ್ಟಾರ್ ಕಮಿನಿಸ್ಟ್ ಪಕ್ಷ. ಸಂಘಟಿಸಿದ್ದ. ಜಿಲ್ಲಾ ಮಟ್ಟದ ವಿಚಾರ ಸಂಕಿರಣವು. ಅತ್ಯಂತ ಯಶಸ್ವಿಯಾಗಿ ಜರುಗಿತು. ಭಾರತದ ಕಮ್ಯುನಿಸ್ಟರು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಅಪಾರವಾದ ತ್ಯಾಗ ಬಲಿದಾನ ಮಾಡಿದರು. ತೆಲಂಗಾಣ. ತೇ ಭಾಗ. ಕಯ್ಯೂ. ವರ್ಲಿ. ಸುವರ್ಣ ಕಣಿವೆ ಸೇರಿದಂತೆ. ಮುಂಬೈ ಕಾರ್ಮಿಕರ ಹಾಗೂ ನೌಕಾದಳಗಳ ಬಂಡಾಯಗಳಿಗೆ ನೇತೃತ್ವ ವಹಿಸಿದರು. ಆದರೆ ತಪ್ಪಾದ ಕಾರ್ಯತಂತ್ರ ಹಾಗೂ ಕಾಂಗ್ರೆಸ್ ಪಾರ್ಟಿಯ ಕುರಿತು ತಾಳಿದ ಅನಿರ್ದಿಷ್ಟ ಅವಾಗಹನೆಯಿಂದಾಗಿ. ಸ್ವಾತಂತ್ರ್ಯ ಚಳುವಳಿಗೆ ನೇತೃತ್ವ ಕೊಡಲಾಗಲಿಲ್ಲ. ಇಡೀ ಸಂಘ ಪರಿವಾರ ಬ್ರಿಟಿಷ್ ವಸಾಹಾತುವಾದಿಗಳ ಜೊತೆ ಇದ್ದು ಭಾರತದ ಸ್ವಾತಂತ್ರ್ಯ ಚಳುವಳಿಗೆ ದ್ರೋಹ ಬಗೆಯಿತು. ಮುಸ್ಲಿಂ ಲೀಗ್ ಸ್ವಾತಂತ್ರ ಚಳುವಳಿಯಲ್ಲಿ ಇದ್ದುಕೊಂಡೆ. ದ್ವಿ ರಾಷ್ಟ್ರ ಸ್ವಾತಂತ್ರ್ಯವನ್ನು ಪ್ರತಿಪಾದಿಸಿತು. ಒಟ್ಟಾರೆ ಸ್ವಾತಂತ್ರ್ಯ ಚಳುವಳಿ ಎಂದರೆ ಕೇವಲ ಕಾಂಗ್ರೆಸ್ ಅಲ್ಲವೇ ಅಲ್ಲ. ಕಮ್ಯುನಿಷ್ಟರ ವಿರೋಚಿತವಾದ ಹೋರಾಟದ ತ್ಯಾಗ ಬಲಿದಾನ ಇದರ ಹಿಂದಿದೆ ಎಂದು. ಕಮ್ಯುನಿಸ್ಟ್ ಪಕ್ಷದ ಮುಖಂಡ. ಆರ್. ಮಾನಸಯ್ಯ. ವಿಚಾರ ಮಂಡಿಸಿದರು .

ಹಾಗೆಯೇ ಭಾರತದಲ್ಲಿ. ದಲಿತ ಚಳುವಳಿ ಹಾಗೂ ಕಮ್ಯುನಿಸ್ಟ್ ಚಳುವಳಿ ಪ್ರತ್ಯೇಕಗೊಂಡಿದ್ದೇ ದೊಡ್ಡ ದುರಂತ. ಭಾರತೀಯ ಸಮಾಜವು. ಯುರೋಪ್ ಮಾದರಿ ಸಮಾಜ ಅಲ್ಲ. ಇಲ್ಲಿ ವರ್ಣಗಳೆ ವರ್ಗಗಳಾಗಿ ತದನಂತರ ಜಾತಿಗಳಾಗಿ ಬೆಳೆದು ಬಂದಿದೆ. ಜಾತಿಯು ಸಮಾಜದ ಮೇಲ್ಪದರಿನಲ್ಲಿರುವ ಸಮಸ್ಯೆ. ಅದು ಕ್ರಾಂತಿಯ ನಂತರ ತನ್ನಿಂದ ತಾನೇ ನಶಿಸಿ ಹೋಗುತ್ತದೆ ಎಂಬ ಧೋರಣೆಯೇ ಕಮ್ಯುನಿಸ್ಟ್ ಚಳುವಳಿಯ ದೌರ್ಬಲ್ಯವಾಗಿದೆ. ಭಾರತದಲ್ಲಿ ಜಾತಿ ಹಾಗೂ ವರ್ಗಗಳು ಪ್ರತ್ಯೇಕಿಸಲಾಗದ. ಆರ್ಥಿಕ ರಾಜಕೀಯ ಹಾಗೂ ಸಾಮಾಜಿಕ ವಾಸ್ತವಗಳಾಗಿವೆ. ಜಾತಿಯು ಇಲ್ಲಿನ ಪ್ರತಿಯೊಂದು ಸಮುದಾಯದ ಆಸ್ತಿ ಅಧಿಕಾರ ಅಂತಸ್ತನ್ನು ನಿರ್ಧರಿಸುತ್ತದೆ. ಬಹುತೇಕ ಮೇಲ್ಜಾತಿಗಳು ಆಸ್ತಿ ಹೊಂದಿದ ಶೋಷಕ ವರ್ಗಗಳಾಗಿವೆ. ನೂರಕ್ಕೆ 99 ರಷ್ಟು. ದಲಿತರು ಹಾಗೂ ದುರ್ಬಲರು. ಆಸ್ತಿ ಇಲ್ಲದ. ಅಸ್ಪೃಶ್ಯತೆ ಹಾಗೂ ಜಾತಿ ತುಳಿತಕ್ಕೆ. ತುತ್ತಾದ ಸಮುದಾಯಗಳಾಗಿವೆ. ಜಾತಿ ನಿರ್ಮೂಲನೆಯೆ. ಅಂಬೇಡ್ಕರ್ ವಾದಿ ಹಾಗೂ ಮಾರ್ಕ್ಸ್ ವಾದಿಗಳ ಪರಮ ಗುರಿಯಾಗಬೇಕು. ಜಾತಿ ನಿರ್ಮೂಲನೆ ಕಾರ್ಯಕ್ರಮ ಇಲ್ಲದೆ ಇಲ್ಲಿ ವರ್ಗ ಹೋರಾಟ ಯಶಸ್ವಿಯಾಗದು. ಬಾಬಾ ಸಾಹೇಬ್ ಅಂಬೇಡ್ಕರರು ಕಮ್ಯುನಿಸ್ಟ್ ವಿರೋಧಿಗಳಾಗಿರಲಿಲ್ಲ. ಅವರು ಕಮ್ಯುನಿಸ್ಟ್ ಮುಂದಾಳುಗಳು ತಾಳಿದ ಯಾಂತ್ರಿಕ ಮಾರ್ಕ್ಸ್ ವಾದವನ್ನು ವಿರೋಧಿಸಿದರು. ಚರಿತ್ರೆಯಲ್ಲಿ ಆದ ತಪ್ಪುಗಳನ್ನು ನಾವು ತಿದ್ದುಕೊಳ್ಳಬೇಕಾಗಿದೆ. ದುಡಿಯೋ ವರ್ಗ ಹಾಗೂ ಧಮನಿತ ಜನಾಂಗಗಳ ಬಲಿಷ್ಠ ಐಕ್ಯ ಚಳುವಳಿಯ ಮೂಲಕ. ರಾಜ್ಯಾಧಿಕಾರವನ್ನು ಕೈವಶ ಮಾಡಿಕೊಳ್ಳಬೇಕಾಗಿದೆ. ಎಂದು. ಆರ್ ಮಾನಸಯ್ಯ ಅವರು. ತಮ್ಮ ಸುಧೀರ್ಘ ವಿಷಯ ಮಂಡನೆ ಮೂಲಕ ಕರೆ ನೀಡಿದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR